

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

Volume : 07 Issue : 310 Sunday 24-08-2025 E-mail : maruti.b.hosamani76@gmail.com Page: 4 Price : Rs. 1/-


## ಎತ್ತುಗಳ ಮೈ ತೊಳೆಯಲು ಹೋಗಿದ್ದ ರೈತನ ಎಳೆದೊಯ್ದ ಮೊಸಳೆ

**ಸಿಹಿ ಕಹಿ ಸುದ್ದಿ,**

**ಮುದ್ದೇಬಿಹಾಳ :** ಅಮಾವಾಸ್ಯೆ ಪ್ರಯುಕ್ತ ಎತ್ತುಗಳನ್ನು ತೊಳೆಯಲು ಕೃಷ್ಣಾ ನದಿ ತೀರಕ್ಕೆ ತೆರಳಿದ್ದ ರೈತ ರೊರ್ವರನ್ನು ಮೊಸಳೆ ಎಳೆದು ಕೊಂಡು ಹೋಗಿರುವ ಘಟನೆ ತಾಲೂಕಿನ ಕುಂಚಗನೂರು ಗ್ರಾಮದಲ್ಲಿ ಶನಿವಾರ ನಡೆದಿದೆ. ತಂಗಡಿಗಿ ಗ್ರಾ.ಪಂ ವ್ಯಾಪ್ತಿಯ ಕುಂಚಗನೂರು ಗ್ರಾಮದ ಪಂಪ ಹೌಸ್ ಬಳಿ ಈ ಘಟನೆ ನಡೆದಿದೆ. ಕುಂಚಗನೂರ ಗ್ರಾಮದ ಕಾಶಿನಾಥ್. ಹನಮಂತ. ಕಂಬಳಿ. (39) ಎಂಬುವರೇ ಮೊಸಳೆ ದಾಳಿಗೆ ಒಳಗಾಗಿ ನಾಪತ್ತೆ ಯಾದವರು. ಕಾಶಿನಾಥ್ ಅಮವಾಸ್ಯೆಯ ಹಿನ್ನೆಲೆ ಎತ್ತುಗಳನ್ನು ತೊಳೆಯಲೆಂದು.



ಹೋದಾಗಮೊಸಳೆದಾಳಿಮಾಡಿ.ಅವರನ್ನು ಹೊತ್ತು ಹೊದಿದನ್ನು ನೋಡಿರುವುದಾಗಿ ಕುಂಚಗನೂರು ಗ್ರಾಮದ ದರೇಪ್ಪ ಬಟಗುರ್ಕಿ ಎಂಬುವವರು ತಿಳಿಸಿದ್ದಾರೆ.

ಕಾರ್ಯಾಚರಣೆ:–

ಕಂದಾಯ ಇಲಾಖೆ. ಅಗ್ನಿಶಾಮಕ. ಪೋಲಿಸ್ ಇಲಾಖೆಯಿಂದ. ಮೊಸಳೆ ಹೊತ್ತೊಯ್ದಿದಿರುವ ವ್ಯಕ್ತಿಗಾಗಿ ಕಾರ್ಯಾಚರಣೆ ಆರಂಭಿಸಲಾಗಿದೆ. ಕೂಡಲ ಸಂಗಮ ದಿಂದ ಬೋಟ್ ತರಿಸಲಾಗಿದ್ದು. ಕಾರ್ಯಾಚರಣೆ ಮುಂದುವರಿಸಲಾಗುವುದು. ಎಂದು ಕಂದಾಯ ಇಲಾಖೆಯ ಮೂಲಗಳು ತಿಳಿಸಿವೆ. ಸ್ಥಳದಲ್ಲಿ ಕಂದಾಯ ನಿರೀಕ್ಷಣಾ ಪವನ್.ತಳವಾರ್. ಗ್ರಾಮ ಆಡಳಿತ ಅಧಿಕಾರಿ. ಹೆಚ್.ಸಿ ಕೊರಬು. ಅಗ್ನಿಶಾಮಕ ಠಾಣೆಯ ಸಿಬ್ಬಂದಿ ಉಪಸ್ಥಿತರಿದ್ದರು ಎಂದು ವರದಿಯಾಗಿದೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಬಸವರಾಜ.ಸಂಕನಾಳ. ಮುದ್ದೇಬಿಹಾಳ**

## ಜೈ ಹಿಂದ್ ಭಾರ್ಗವ" ಗೆ – ಭರದಿಂದ ಚಿತ್ರೀಕರಣ



**ಬೆಂಗಳೂರು :** ಮಾಯಮ್ಮ ಸಿನಿ ಕ್ರಿಯೇಶನ್ಸ್ ಬೆಂಗಳೂರು ಅರ್ಪಿಸುವ "ಜೈ ಹಿಂದ್ ಭಾರ್ಗವ" ಕನ್ನಡ ಚಲನ ಚಿತ್ರ ಕಳೆದೊಂದು ವಾರದಿಂದ ಸದ್ದಿಲ್ಲದೆ ಭರದಿಂದ ಚಿತ್ರೀಕರಣ ನಡೆಸಿದೆ ಚಿತ್ರ ತಂಡ.

ಭಾರತದ ಜಮ್ಮು ಕಾಶ್ಮೀರದ ಪಹಲ್ಗಾಮ್ ದಾಳಿ ಮತ್ತು ಆಪರೇಶನ್ ಸಿಂಧೂರದ ಕಥಾ ವಸ್ತು ಹೊಂದಿದ್ದು, ಸತತ ಚಿತ್ರೀಕರಣ ನಡೆಸಿದ್ದೇವೆ. ಚಿತ್ರದಲ್ಲಿ ಹಾಡುಗಳಿಲ್ಲ, ಬೆಂಗಳೂರು, ಚಿಕ್ಕಬಳ್ಳಾಪೂರ, ಮೈಸೂರು, ಡೊಡ್ಡ ಬಳ್ಳಾಪೂರ, ಘಾಟಿ ಸುಬ್ರಮಣ್ಯ ಮೊದಲಾದ ಕಡೆ ಚಿತ್ರೀಕರಣ ನಡೆಸಲಿದೆ ಎಂದು ನಿರ್ದೇಶಕ ಎನ್.ಟಿ ಜಯರಾಮ್ ತಿಳಿಸಿದ್ದಾರೆ. ಈ ಚಿತ್ರದ ತಾರಾಗಣದಲ್ಲಿ ಮಾಸ್ಟರ್ ಚಿನ್ಮಯ್, ಮಾಸ್ಟರ್ ನಿಶ್ಚಲ್, ಕುಮಾರಿ ಪೂರ್ವಿಕ, ಚಲನ ಚಿತ್ರ ನಿರ್ದೇಶಕರಾದ ವಸಂತ್ಕುಮಾರ್, ರೋಹಿಣಿ ಮೈಸೂರ್, ಯಶೋದಮ್ಮ, ಮನು, ರವಿ, ಸುಪ್ರೀತ್, ಮಂಜುರ್, ಗೀತಾನಂದಕುಮಾರ್ ಹಾಗೂ, ವಿಶೇಷ ಸೈನ್ಯಾಧಿಕಾರಿ ಪಾತ್ರದಲ್ಲಿ ಚಲನಚಿತ್ರ ನಟ–ನಿರ್ದೇಶಕರಾದ ಹರಿಹರನ್.ಬಿ ಪಿ ಅವರು ನಟಿಸುತ್ತಿದ್ದಾರೆ. ಛಾಯಾಗ್ರಹಣ ಭುವನ್ ರೆಡ್ಡಿ, ವರ್ಣಾಲಂಕಾರ ಕಾಂತರಾಜು, ಸಂಕಲನ ಮುತ್ತುರಾಜ್.ಟಿ, ಸಂಗೀತ ಶಿವಸತ್ಯ, ಪತ್ರಿಕಾ ಸಂಪರ್ಕ ಕಾರ್ತಿಕ್, ಡಾ.ಪ್ರಭು ಗಂಜಿಹಾಳ, ಡಾ, ವೀರೇಶ ಹಂಡಿಗಿ, ನಿರ್ಮಾಣ ನಿರ್ವಹಣೆ ಜವಾಬ್ದಾರಿ ಬೆಳ್ಳೂ ರಾಜು, ಸಹ ನಿರ್ದೇಶನ ಎಸ್. ಶ್ರೀನಿವಾಸ್ ಅವರದಿದೆ. ಈ ಚಿತ್ರಕ್ಕೆ ಕಥೆ ಚಿತ್ರಕಥೆ ಸಂಭಾಷಣೆಯನ್ನು ಬರೆದು ಎನ್.ಟಿ ಜಯರಾಮ್ ರೆಡ್ಡಿ ನಿರ್ದೇಶನದ ಜವಾಬ್ದಾರಿಯನ್ನೂ ಹೊತ್ತಿದ್ದಾರೆ. ನಿರ್ಮಾಪಕರು ಕುಮಾರಿ ತನ್ಮಯ್. ಎನ್ ಆಗಿದ್ದಾರೆ. ಒಂದೇ ಹಂತದಲ್ಲಿ ಚಿತ್ರೀಕರಣ ನಡೆಸಿ ನವಂಬರ್‌ನಲ್ಲಿ ಚಿತ್ರ ಬಿಡುಗಡೆ ಮಾಡುವ ಆಲೋಚನೆ ಚಿತ್ರ ತಂಡದ್ದಾಗಿದೆ.

**ಡಾ, ಪ್ರಭು ಗಂಜಿಹಾಳ**

**ಮೊ:9448775346**

## ಈರುಳ್ಳಿ ಬೆಳೆಗಾರರ ಸಂಘದ ವತಿಯಿಂದ ಬೃಹತ್ ಪ್ರತಿಭಟನೆಯ ಪೂರ್ವಭಾವಿ ಸಭೆ

**ಸಿಹಿ ಕಹಿ ಸುದ್ದಿ,**

**ಕೊಟ್ಟೂರು :** ವಿಜಯನಗರ ಜಿಲ್ಲೆಯ ಕೊಟ್ಟೂರು ತಾಲೂಕಿನ ಕೊಟ್ಟೂರು ಪಟ್ಟಣದಲ್ಲಿ ಕರ್ನಾಟಕ ರಾಜ್ಯ ಈರುಳ್ಳಿ ಬೆಳೆಗಾರರ ಸಂಘದ ವತಿಯಿಂದ ದಿನಾಂಕ 25 ಆಗಸ್ಟ್ 2025 ರಂದು ಸೋಮವಾರ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುತ್ತದೆ. ಕಾರಣ ಅಕಾಲಿಕ ಮಳೆಯಿಂದ ಸುಮಾರು 15 ಸಾವಿರ ಎಕ್ರೆ ಈರುಳ್ಳಿ ಬೆಳೆ ರೋಗಗಳಿಂದ ತುತ್ತಾಗಿ ನಾಶವಾಗಿದೆ ಎಂದು ಪಟ್ಟಣದ ಮಹಾತ್ಮ ಗಾಂಧಿ ಪ್ರತಿಮೆ ಯಿಂದ ಬಸ್ ನಿಲ್ದಾಣದ ವೃತ್ತದ ವರೆಗೆ



ಬೃಹತ್ ಪ್ರತಿಭಟನೆಗೆ ಕರ್ನಾಟಕ ರಾಜ್ಯ ಬೆಳೆಗಾರರ ಸಂಘದ ಜಿಲ್ಲಾ ಅಧ್ಯಕ್ಷರಾದ ಕೊಚಾಲಿ ಮಂಜುನಾಥ ಕರೆ ನೀಡಿದ್ದಾ–ರೆ. ಸೋಮವಾರ ದಂದು ವಿಜಯನಗರ ಜಿಲ್ಲೆಯ ಎಲ್ಲಾ ಈರುಳ್ಳಿ ಬೆಳೆಗಾರರು ಹಾಗೂ ಇನ್ನಿತರ ಸಂಘಟನಾಕಾರರು ಸಹಕಾರ ನೀಡಿ ಪ್ರತಿಭಟನೆಯನ್ನು ಯಶಸ್ವಿಯಾಗಿ ನಡೆಸಿ ಕೊಡಲು ನಮ್ಮ ಸುದ್ದಿ ವಾಹಿನಿ ಯೊಂದಿಗೆ ಮನವಿ ಮಾಡಿ ಕೊಂಡರು. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಈರುಳ್ಳಿ ಬೆಳೆಗಾರರ ಸಂಘದ ರಾಜ್ಯ ಅಧ್ಯಕ್ಷರಾದ ಎನ್.ಎಂ ಸಿದ್ದೇಶ್ ಉತ್ತಂಗಿ, ಉಪಾಧ್ಯಕ್ಷರಾದ ಕರಡಿ ಶಾಂತಕುಮಾರ್, ಕೊಟ್ಟೂರು ತಾಲೂಕು ಅಧ್ಯಕ್ಷರಾದ ಯು. ಉಮೇಶ್, ಮಂಜುನಾಥ್ ನಿಂಗನಗೌಡ ಉಪಸ್ಥಿತರಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್. ಕೆ ನ್ಯೂಸ್ ಕನ್ನಡ ಚಾನಲ್: ಪ್ರದೀಪ್. ಕುಮಾರ್.ಸಿ.ಕೊಟ್ಟೂರು**

## ಪುರಸಭೆ ಸಾಮಾನ್ಯಸಭೆ: ಕೆರೆ ಅಭಿವೃದ್ಧಿಗೆ 36 ಲಕ್ಷ ರೂ.ಗಳ ಕ್ರಿಯಾ ಯೋಜನೆಗೆ ಅಸ್ತು

**ಮಹಾಲಿಂಗಪುರ :** ಪಟ್ಟಣದ ಪುರಸಭೆಯ ಸ್ಥಳೀಯ ಆದಾಯದ ಕೆರೆ ಅಭಿವೃದ್ಧಿ ಶುಲ್ಕದಿಂದ ಸಂಗ್ರಹವಾದ 36 ಲಕ್ಷ ರೂ. ಗಳಲ್ಲಿ ಪಟ್ಟಣದ ಕುಡಿಯುವ ನೀರಿನ ಮೂಲಾಧಾರವಾದ ಕೆರೆಯ ಅಭಿವೃದ್ಧಿಯ ಕ್ರಿಯಾ ಯೋಜನೆ ಮಂಜೂರಿಗೆ

ಸೋಮವಾರ ಪುರಸಭೆ ಸಭಾಭವನದಲ್ಲಿ ಅಧ್ಯಕ್ಷ ಯಲ್ಲನಗೌಡ ಪಾಟೀಲ ಅಧ್ಯಕ್ಷತೆಯಲ್ಲಿ ಜರುಗಿದ ಪುರಸಭೆ ಸಾಮಾನ್ಯ ಸಭೆಯಲ್ಲಿ, ಈ ಕುರಿತು ಚರ್ಚಿಸಿ ಠರಾವು ಪಾಸ ಮಾಡಲಾಯಿತು.

ಪುರಸಭೆ ಸದಸ್ಯ ರವಿ ಜವಳಗಿ ಮಾತನಾಡಿ ಪಟ್ಟಣದ ಹಿಂದೂ ರುದ್ರಭೂಮಿ ಬಯಲು ಶೌಚಕ್ಕೆ ಉಪಯೋಗವಾಗುತ್ತಿದೆ. ಹಾಳಾದ ಕಂಪೌಂಡ ಗೋಡೆ ಕಟ್ಟಿ ಸ್ವಚ್ಛತೆಗಾಗಿ ಒತ್ತಾಯಿಸಿದರು.

ಸದಸ್ಯ ಬಸವರಾಜ ಚಮಕೇರಿ ಮಾತನಾಡಿ ಪ್ರತಿ ವರ್ಷಕ್ಕೆ ಸ್ಮಶಾನದಲ್ಲಿ ಕಂಬಿ ಮಲ್ಲಯ್ಯ ಹಾಯ್ದು ಹೋಗುವ ರಸ್ತೆಗೆ ಪ್ಲೇವರ್ ಬ್ಲಾಕ ಅಳವಡಿಸಿ, ಶೆಟರ್ ಅಳವಡಿಸಲು ಒತ್ತಾಯಿಸಿದರು.

ಪುರಸಭೆ ಅಧ್ಯಕ್ಷ ಯಲ್ಲನಗೌಡ ಪಾಟೀಲ, ಮುಖ್ಯಾಧಿಕಾರಿ ಎನ್. ಎ. ಲಮಾಣಿ ಪ್ರತಿಕ್ರಿಯಿಸಿ ಈಗಾಗಲೇ ಸ್ಮಶಾನ ಅಭಿವೃದ್ಧಿಗೆ ಮಂಜೂರಿಯಾದ ಐವತ್ತು ಲಕ್ಷ ರೂ. ಕಾಮಗಾರಿ ಕೆಲಸವನ್ನು ಗುತ್ತಿಗೆದಾರರು ಮಾಡುತ್ತಿಲ್ಲ. ಮರು ಟೆಂಡರ್ ಕರೆದು ಆ ಐವತ್ತು ಲಕ್ಷ ಅನುದಾನದಲ್ಲಿಯೆ ಸ್ಮಶಾನದ ಗೋಡೆಯ ಎತ್ತರ, ಕಂಪೌಂಡ ನಿರ್ಮಾಣ



ಮಾಡಲಾಗುವದು ಎಂದರು.

ಸದಸ್ಯ ಬಸವರಾಜ ಚಮಕೇರಿ ಮಾತನಾಡಿ 2021 ರಲ್ಲಿ ಅರ್ಜಿ ಹಾಕಿದ ಟೇಜ್ರರಿ ಮತ್ತು ಯಂತ್ರಗಳ ವಿತರಣೆಯು ನಮ್ಮ ಪುರಸಭೆಯಲ್ಲಿ ಮಾತ್ರ ವಿಳಂಬವಾಗಿದೆ. ನವೆಂಬರ್ ಎಂಟಕ್ಕೆ ಪುರಸಭೆ ಸದಸ್ಯರ ಅವಧಿ ಮುಗಿಯುವ ಮುನ್ನವೇ ಫಲಾನುಭವಿಗಳಿಗೆ ವಿತರಿಸುವ ಕೆಲಸ ಆಗಲಿ ಎಂದರು.

ಸದಸ್ಯ ಬಸವರಾಜ ಹಿಟ್ಟಿನಮಠ ಮಾತನಾಡಿ ಪುರಸಭೆ ಮುಖ್ಯಾಧಿಕಾರಿಗಳು ಮತ್ತು ಸಿಬ್ಬಂದಿಯು ಪುರಸಭೆಯ 23 ಸದಸ್ಯರು ಮತ್ತು ನಾಮ ನಿರ್ದೇಶಿತ ಐದು ಜನ ಸದಸ್ಯರು ಹೇಳುವ ಕೆಲಸ ಕಾರ್ಯಗಳಿಗೆ ಶೀಘ್ರ ಸ್ಪಂದಿಸಿ ಕೆಲಸ ಮಾಡಿರಿ. ಶೀಘ್ರದಲ್ಲೇ ಪುರಸಭೆಯ ಚುನಾವಣೆಯು ಬರುವುದ–ರಿಂದ ಸಾರ್ವಜನಿಕರಿಗೆ ಅನುಕೂಲವಾಗುವ ಕೆಲಸಗಳನ್ನು ಶೀಘ್ರ ಪೂರ್ಣಗೊಳಿಸಲು ಒತ್ತಾಯಿಸಿದರು.

ಸದಸ್ಯರಾದ ಎಸ್. ಬಿ. ಅಂಗಡಿ, ಮುಸ್ತಾಕ ಚಿಕ್ಕೋಡಿ, ಬಸವರಾಜ ಯರಗಟ್ಟಿ, ವಿನೋದ ಸಿಂಪಿ ಮಾತನಾಡಿದರು. ಮುಖ್ಯಾಧಿಕಾರಿಗಳು ಮತ್ತು ಅಧ್ಯಕ್ಷರು ಮಾತನಾಡಿ ಈಗಾಗಲೇ ಮಂಜೂರಿಯಾದ ಮತ್ತು ಟೆಂಡರ್ ಪ್ರಕ್ರಿಯೆ ಮುಗಿದ ಎಲ್ಲಾ ಕೆಲಸಗಳನ್ನು ಶೀಘ್ರ ಪ್ರಾರಂಭಿಸಿ ನವೆಂಬರ್ ಒಳಗೆ ಮುಗಿಸುವದಾಗಿ ತಿಳಿಸಿದರು.

ಪ್ರಮುಖ ಠರಾವು ಪಾಸ್ :

ಮಹಾಲಿಂಗೇಶ್ವರ ಜಾತ್ರೆಯ ತುರ್ತು ಕಾಮಗಾರಿಗಳ ಕುರಿತು ಚರ್ಚೆ, ಜಾತ್ರೆಯಲ್ಲಿ ಆಟದ ಯಂತ್ರೋಪಕರಣಗಳು, ಗುಡಾರ, ಇತರ ಅಂಗಡಿಗಳಿಗೆ ಎನ್‌ಓಸಿ ನೀಡಲು ಬಹಿರಂಗ ಹರಾಜು ಕರೆಯುವದು; ಜಾತ್ರೆಯಲ್ಲಿ ತಾತ್ಕಾಲಿಕವಾಗಿ ಹಾಕಿದ ಗುಡಾರಗಳಿಗೆ ಜಾತ್ರಾ ಫೀ ವಸೂಲಿ ಕು–ರಿತು; ಸ್ವಚ್ಛ ಭಾರತ ಮಿಷನ್ದಲ್ಲಿ ಘನತ್ಯಾಜ್ಯ ನಿರ್ವಹಣೆಗಾಗಿ ಹೊರಗುತ್ತಿಗೆ ಮೂಲಕ ಮಾನವ ಸಂಪನ್ಮೂಲ ಪಡೆಯಲು ಟೆಂಡರ್ ಕರೆಯುವದು; 15 ಹಣಕಾಸು ಮತ್ತು 2025–26 ನೇ ಸಾಲಿನ ಎಸ್.ಎಫ್.ಸಿ. ಮುಕ್ತ ನಿಧಿ, ಸ್ಥಳೀಯ ನಿಧಿಯಲ್ಲಿ ಕರೆದ ಟೆಂಡರ್ಗಳಿಗೆ ಅನುಮೋದನೆ, 2025–26 ನೇ ಸಾಲಿನ ಎಸ್‌ಎಫ್ಸಿ ಮುಕ್ತ ನಿಧಿ, ಸ್ಥಳಿಯ ನಿಧಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಹಾಗೂ ಶೇ. 24.10 ಹಾಗೂ 7.25 ಅಡಿಯಲ್ಲಿ ಶಿಕ್ಷಣಕ್ಕಾಗಿ ವಿಶೇಷ ನೆರವು ನೀಡುವದು ಸೇರಿದಂತೆ ಹಲವು ವಿಷಯಗಳಿಗೆ ಸರ್ವಾನುಮತದಿಂದ ಠರಾವು ಪಾಸ ಮಾಡಲಾಯಿತು.

ಪುರಸಭೆ ಮುಖ್ಯಾಧಿಕಾರಿ ಎನ್. ಎ. ಲಮಾಣಿ, ಉಪಾಧ್ಯಕ್ಷೆ ಶೀಲಾ ರಾಜೇಶ ಭಾವಿಕಟ್ಟಿ,

ಸ್ಥಾಯಿ ಸಮಿತಿ ಚೇರಮನ್ ಅಬ್ದುಲ್ ರಜಾಕ್ ಬಾಗವಾನ, ಸದಸ್ಯರಾದ ಸಜ್ಜನಸಾಬ ಪೆಂಡಾರಿ, ಬಸವರಾಜ ಬುರುಡ, ರಾಜು ಗೌಡಪ್ಪಗೋಳ, ಸವಿತಾ ಹುರಕಡ್ಲಿ, ಚಾಂದನಿ ನಾಯಕ, ಗೋದಾವರಿ ಬಾಟ, ಸುಜಾತಾ ಮಾಂಗ, ಡಾ. ಸವಿತಾ ಕೋಳಿಗುಡ್ಡ, ಸ್ನೇಹಲ್ ಅಂಗಡಿ, ನಾಮ ನಿರ್ದೇಶಿತ ಸದಸ್ಯರಾದ ವಿನೋದ ಸಿಂಪಿ, ಬಸವರಾಜ ಕರೆಹೊನ್ನ, ಅನಂತನಾಗ ಬಂಡಿ, ಅಪ್ಪಾಸಾಬ ನಾಲಬಂದ, ಲಕ್ಕಪ್ಪ ಭಜಂತ್ರಿ, ಪುರಸಭೆ ವ್ಯವಸ್ಥಾಪಕ ಎಸ್. ಎನ್. ಪಾಟೀಲ, ಅಧಿಕಾರಿಗಳಾದ ಎಂ. ಎಂ. ಮುಗಳಖೋಡ, ಪಿ. ವೈ. ಸೊನ್ನದ, ಸಿ. ಎಸ್. ಮಠಪತಿ ಸೇರಿದಂತೆ ಸಿಬ್ಬಂದಿ ಭಾಗವಹಿಸಿದ್ದರು.

## ರಸ್ತೆ ತುಂಬಾ ಬರೀ ಗುಂಡಿಗಳು: ಜೀವಕ್ಕಿಲ್ಲ ಕಿಂಚಿತ್ತೂ ಬೆಲೆ



**ಬನಹಟ್ಟಿ :** ಸಮೀಪದ ಆಸಂಗಿ–ಬನಹಟ್ಟಿ ರಸ್ತೆಯು ಬರೀ ಗುಂಡಿಗಳಿಂದ ತುಂಬಿದ್ದು, ಜನರು ಪ್ರತಿ ದಿನ ಹತ್ತಾರು ಗುಂಡಿಗಳನ್ನು ತಪ್ಪಿಸಲು ಹೋಗಿ ಅಪಘಾತಗಳಿಗೆ ತುತ್ತಾಗುತ್ತಿದ್ದಾರೆ. ಕೆಲವೊಮ್ಮೆ ಜೀವಕ್ಕೂ ಹಾನಿಯಾದ ನಿದರ್ಶನಗಳು ಜರುಗಿವೆ.

ಈ ರಸ್ತೆಯಲ್ಲಿ ಜನರ ಜೀವಗಳಿಗೆ ಕಿಂಚಿತ್ತೂ ಬೆಲೆಯೇ ಇಲ್ಲದಂತಾಗಿದೆ. ಲಕ್ಷಾಂತರ ರೂ. ಖರ್ಚು ಮಾಡಿ ನಿರ್ಮಿಸಿರುವ ರಸ್ತೆ ಕಳಪೆ ಗುಣಮಟ್ಟದ ಕಾಮಗಾ–ರಿಯಿಂದ ಜನರಿಗೆ ಮಾರಕವಾಗಿದೆ. ಹಲವು ವರ್ಷಗಳಿಂದ ಗುಂಡಿಗಳು ತೆರೆದುಕೊಂಡಿದ್ದರೂ, ಅವು ಅಧಿಕಾರಿಗಳ, ಶಾಸಕರ ಕಣ್ಣಿಗೆ ಕಾಣದಂತಾಗಿವೆ. ರಾಜ್ಯ ಹೆದ್ದಾರಿ ಸಂಪರ್ಕದಲ್ಲಿಯೇ ಇರುವ ಕಾರಣ ನಿರಂತರವಾಗಿ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿ ದಿನಂಪ್ರತಿ ಅಪಘಾತ ಸಾಮಾನ್ಯವಾಗಿವೆ.

ಕಳೆದೆರಡು ದಿನಗಳ ಹಿಂದೆಯಷ್ಟೇ ಲಾರಿ–ಬೈಕ್ ನಡುವೆ ಉಂಟಾಗಿದ್ದ ಭೀಕರ ಅಪಘಾತದಲ್ಲಿ ಬೈಕ್ ಸವಾರನೋರ್ವ ಸ್ಥಳದಲ್ಲಿಯೇ ಸಾವನ್ನಪ್ಪಿದ್ದರೆ,

**'ಆಸಂಗಿ–ಬನಹಟ್ಟಿ ರಸ್ತೆಯು ಬರೀ ಗುಂಡಿಗಳಿಂದಲೇ ಕೂಡಿದೆ. ಇಲ್ಲಿ ಅಪಘಾತಗಳು ಸಾಮಾನ್ಯವಾಗಿವೆ. ತಕ್ಷಣವೇ ದುರಸ್ಥಿ ಕಾರ್ಯವಾಗಬೇಕು'**

**| ಹರ್ಷವರ್ಧನ ಪಟವರ್ಧನ, ನ್ಯಾಯವಾದಿ.**

ಸಣ್ಣ–ಪುಟ್ಟ ಗಾಯಗಳೊಂದಿಗೆ ದಿನಂಪ್ರತಿ ಅಪಘಾತ ನಡೆಯುತ್ತಲಿವೆ.

ಅತಿ ವೇಗವಾಗಿ ಸಂಚರಿಸುವ ವಾಹನಗಳಿಗೆ ಇಲ್ಲಿನ ತಗ್ಗು ಪ್ರದೇಶಗಳು ಕಂಡು ಬರುತ್ತಿಲ್ಲ. ಮಳೆಗಾಲದಲ್ಲಂತೂ ಇಲ್ಲಿನ ಗೋಳು ಹೇಳತೀರದು. ರಬಕವಿ–ಬನಹಟ್ಟಿ ತಾಲೂಕಿನಾದ್ಯಂತ ಅಲ್ಲಲ್ಲಿ ಇಂತಹ ತಗ್ಗು–ಗುಂಡಿಗಳಿರುವ ರಸ್ತೆಗಳು ಕಾಣ ಸಿಗುವುದು ಸಾಮಾನ್ಯವಾಗಿದೆ.

ತಕ್ಷಣವೇ ಸಂಬಂಧಿಸಿದ ಇಲಾಖೆಯವರು ಬೇಗನೆ ರಸ್ತೆ ದುರಸ್ಥಿ ಕಾರ್ಯ ನಡೆಸಿ ಸುಗಮ ಸಂಚಾರಕ್ಕೆ ಅವಕಾಶ ನೀಡಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

## ಅಲ್ಲಮಪ್ರಭುದೇವರ ಜಾತ್ರೆ: ತುಂತುರು ಮಳೆಯ ನಡುವೆಯೂ ಸಂಭ್ರಮದ ಪಲ್ಲಕ್ಕಿ ಉತ್ಸವ

**ತೇರದಾಳ:** ವಚನಗಳ ಗಾರುಡಿಗ ತೇರದಾಳ ಕ್ಷೇತ್ರಾಧಿಪತಿ ಅಲ್ಲಮಪ್ರಭುದೇವರ ಜಾತ್ರಾ ಮಹೋತ್ಸವವು ಶ್ರಾವಣ ಮಾಸದ ಕೊನೆಯ ಸೋಮವಾರ ಸಂಭ್ರಮ ಸಡಗರದಿಂದ ಜರುಗಿತು.

ಜಾತ್ರೆಯ ನಿಮಿತ್ಯ ಪ್ರಭುದೇವರ ಗದ್ದುಗೆಗೆ ನಸುಕಿನ ಜಾವ ರುದ್ರಾಭಿಷೇಕ, ಉದು ನೀಡುವುದು, ವಿಶೇಷ ಅಲಂಕಾ–ರಿತ ಪೂಜೆ ಹಾಗೂ ಧಾರ್ಮಿಕ ವಿಧಿ ವಿಧಾನಗಳು ಅರ್ಚಕರಿಂದ ಜರುಗಿದವು. ಸಂಪ್ರದಾಯದಂತೆ ನಾಡಗೌಡರ ಮನೆಯಿಂದ ಆರತಿ ಹಾಗೂ ನಂದಿಕೋಲು ದೇವಸ್ಥಾನಕ್ಕೆ ಬಂದ ಬಳಿಕ ಪೂಜೆ ನಡೆದು ತುಂತುರು ಮಳೆಯ ನಡುವೆಯೂ ಪಲ್ಲಕ್ಕಿ ಹಾಗೂ ನಂದಿಕೋಲು ಉತ್ಸವಕ್ಕೆ ಚಾಲನೆ ನೀಡಲಾಯಿತು.

ಸುಮಾರು ಮೂರು ಗಂಟೆಗಳ ಕಾಲ ದೇವಸ್ಥಾನದ ಆವರಣದಲ್ಲಿ ನಡೆದ ಉತ್ಸವದಲ್ಲಿ ಪಾಲ್ಗೊಂಡಿದ್ದ ಸಾವಿರಾರು ಭಕ್ತಾಧಿಗಳು ಬೆಂಡು ಉತ್ತತ್ತಿ, ಬರ್ಫಿ, ಬಿಸ್ಕತ್, ಸಕ್ಕರೆ ನೈವೇದ್ಯ ಸಲ್ಲಿಸಿದರು. ಇನ್ನು ಕೆಲವರು ತಮ್ಮ ಚಿಕ್ಕಮಕ್ಕಳ ತೂಕದಷ್ಟು





ಸಕ್ಕರೆ ನೀಡಿ ಹರಕೆ ತೀರಿಸಿದರು. ಕರಡಿ ಮೇಳ, ಹಲಗೆ, ಸಾಂಬಾಳ, ಪ್ರಭುಲಿಂಗ ಝಾಂಜ್ ಕಲಾವಿದರು ಉತ್ಸವದಲ್ಲಿ ಪಾಲ್ಗೊಂಡು ಮೆರಗು ನೀಡಿದರು. ಹಲವು ಭಕ್ತರು ನಿಗದಿತ ಸ್ಥಳಗಳಲ್ಲಿ ವಚನ ಗೀತೆಗಳನ್ನು ಹಾಡಿ ಉತ್ಸವಕ್ಕೆ ಕಳೆ ಕಟ್ಟಿದರು. ಮಹಾರಾಷ್ಟ್ರದ ಮುಂಬಯಿ, ಪುಣೆ, ಕೊಲ್ಲಾಪುರ, ಸಾಂಗಲಿ, ಇಚಲಕರಂಜಿ, ಬೆಂಗಳೂರು, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಬಾಗಲಕೋಟೆ, ವಿಜಯಪುರ, ದಾವಣಗೇರಿ ಸೇರಿದಂತೆ ವಿವಿಧ ಜಿಲ್ಲೆಗಳಿಂದ ಸಾವಿರಾರು ಭಕ್ತರು ಆಗಮಿಸಿದ್ದರು.

ಹೂವು, ದೀಪಗಳಿಂದ ಅಲಂಕಾರ–ಜಾತ್ರಾ ಮಹೋತ್ಸವ ನಿಮಿತ್ಯ ಅಲ್ಲಮಪ್ರಭುದೇವರ ದೇವಸ್ಥಾನವನ್ನು ವಿವಿಧ ಬಗೆಯ ಹೂವುಗಳು ಹಾಗೂ ವಿದ್ಯುತ್ ದೀಪಗಳಿಂದ ಶೃಂಗಾರಗೊಳಿಸಲಾಗಿತ್ತು. ಹೂವಿನಿಂದಲೇ ಶ್ರೀ ಅಲ್ಲಮಪ್ರಭು ದೇವಸ್ಥಾನ ಎಂದು ಅಲಂಕರಿಸಿದ್ದು ಭಕ್ತರ ಮನಸೆಳೆಯಿತು.

ಜಾತ್ರೆಯ ನಿಮಿತ್ಯ ಭಾನುವಾರ ರಾತ್ರಿಯಿಂದ ಸೋಮವಾರ ನಸುಕಿನ ಜಾವದವರೆಗೆ ಸಾವಿರಾರು ಭಕ್ತರು ದೀರ್ಘ ನಮಸ್ಕಾರ ಹಾಕಿ ಹರಕೆ ತೀರಿಸಿದರು.

ಇನ್ನು ಜಾತ್ರೆಯ ನಿಮಿತ್ಯ ಪ್ರಭುಲಿಂಗೇಶ್ವರ ಅನ್ನಪ್ರಸಾದ ಸಮಿತಿ ಕೈಗೊಂಡಿರುವ ದಾಸೋಹದಲ್ಲಿ ಹಾಲುಗ್ಗಿ, ಪಲ್ಲೆ, ಅನ್ನ ಸಾಂಬರ ಪ್ರಸಾದ ಸೇವೆ ನಿರಂತರವಾಗಿ ನಡೆದಿತ್ತು.

## ಕಾಡಸಿದ್ಧೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ

**ಬನಹಟ್ಟಿ :** ಇಲ್ಲಿನ ಕಾಡಸಿದ್ಧೇಶ್ವರ ದೇವಸ್ಥಾನದಲ್ಲಿ ಶ್ರಾವಣ ಮಾಸದ ಕೊನೆಯ ಸೋಮವಾರದ ಅಂಗವಾಗಿ ವಿಶೇಷ ಪೂಜೆಯನ್ನು ಹಮ್ಮಿಕೊಳ್ಳಲಾಗಿತ್ತು. ಬೆಳಿಗ್ಗೆ ದೇವಸ್ಥಾನದಲ್ಲಿ ಅರ್ಚಕರು ಅಭಿಷೇಕ ಮಾಡಿದರು. ಸಮೀಪದ ಶೂರ್ಪಾಲಿಯಿಂದ ಆಗಮಿಸಿದ್ದ ಭಕ್ತರು, ವಿಶೇಷ ನೈವೇದ್ಯವನ್ನು ಸಲ್ಲಿಸಿದರು.

ಮಧ್ಯಾಹ್ನ ನಿರ್ಮಾಣ ಮಾಡಲಾದ ಬೆಳ್ಳಿ ಪೂಜೆ ಭಕ್ತರ ಗಮನ ಸೆಳೆಯಿತು.

ದೇವಸ್ಥಾನದ ಆವರಣದಲ್ಲಿ



ಮಧ್ಯಾಹ್ನ ಮತ್ತು ರಾತ್ರಿ ಎರಡು ಬಾರಿ ಭಕ್ತರಿಗೆ ಪ್ರಸಾದ ವ್ಯವಸ್ಥೆಯನ್ನು ಮಾಡಲಾಗಿತ್ತು.

ದುಂಡಯ್ಯ ಕಾಡದೇವರ, ಪರಮೇಶ್ವರ ಕಾಡದೇವರ, ಕಲ್ಲಯ್ಯ ಕಾಡದೇವರ, ನಿಜಗುಣಯ್ಯ ಕಾಡದೇವರ, ಬಸವರಾಜ ಕಾಡದೇವರ, ಸಾಗರ ಕಾಡದೇವರ, ಕಾಡಯ್ಯ ಕಾಂತಿಮಠ ಸೇರಿದಂತೆ ಇನ್ನೂ ಅನೇಕರು ಪಾಲ್ಗೊಂಡಿದ್ದರು.

# ದುಡಿಯದೆ ಉಣ್ಣುವ ಹಕ್ಕು ಯಾರಿಗೂ ಇಲ್ಲ



**ಜಮಖಂಡಿ :** ಶ್ರಮವನ್ನು ಪೂಜಿಸಬೇಕು. ಸತ್ಯದಿಂದ ಬದುಕುವುದು ನಿಜವಾದ ಧರ್ಮ. ದುಡಿಯದೆ ಊಟ ಮಾಡುವ ಹಕ್ಕು ಯಾರಿಗೂ ಇಲ್ಲ.

ದುಡಿದು ತಿಂದು ಶುದ್ಧವಾದ ಜೀವನ ನಡೆಸುತ್ತಿದ್ದೇನೆ ಎಂಬ ಭಾವನೆ ಪ್ರತಿಯೊಬ್ಬರಲ್ಲೂ ಮೂಡಬೇಕು ಎಂದು ಸಹಾಯಕ ಪ್ರಾಧ್ಯಾಪಕಿ ಹೇಮಾ ಪಾಟೀಲ ಹೇಳಿದರು.

ಶ್ರಾವಣ ಮಾಸದ ನಿಮಿತ್ಯ ಓಲೆಮಠದ ಆಶ್ರಯದಲ್ಲಿ ಜರುಗುತ್ತಿರುವ ಓಣಿಗೊಂದು ದಿನ ವಚನ ಶ್ರಾವಣ ಅಂಗವಾಗಿ ಅಮೋಘಸಿದ್ಧ ದೇವಸ್ಥಾನದಲ್ಲಿ ಶನಿವಾರ ಸಂಜೆ ನಡೆದ ಇಪ್ಪತ್ಮೂರನೆ ದಿನದ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಅವರು 'ಸತ್ಯಶುದ್ಧ ಕಾಯಕವಲ್ಲದವರು ಭಕ್ತರಲ್ಲ' ಎಂಬ ವಿಷಯ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಕಾಯಕ ಸತ್ಯಶುದ್ಧವಾಗಿರಬೇಕು. ಕಾಯಕದಲ್ಲಿ ಮೋಸ, ವಂಚನೆ ಇರಬಾರದು. ಸತ್ಯಶುದ್ಧವಲ್ಲದ ಕಾಯಕ ದೇವರಿಗೆ ಅರ್ಪಿತವಾಗದು. ಅಸತ್ಯದಿಂದ ಮಾಡಿದ ಕೆಲಸ ಆ ಹೊತ್ತಿಗೆ ಬಹಳ ಹೊಳೆದರೂ ಕೂಡ ನಂತರ ಅದು ಕುಸಿದು ಬೀಳುತ್ತದೆ ಎಂದು ಎಚ್ಚರಿಸಿದರು.

ಓಲೆಮಠದ ಆನಂದ ದೇವರು ಶ್ರೀಗಳು ಸಾನಿಧ್ಯವಹಿಸಿ ಮಾತನಾಡಿ, ಪರಧನ, ಪರಸತಿ ಮುಟ್ಟದಿರುವುದು ನೇಮ. ಮಹಾತ್ಮರು ಹೇಳಿದ ಒಂದು ಮಾತನ್ನಾದರೂ ನೆನಪಿಸಿಕೊಂಡರೆ ಅಸತ್ಯದ ಮಾರ್ಗ ಬೇಡವೆನಿಸುತ್ತದೆ ಎಂದು ಆಶೀರ್ವಚನ ನೀಡಿದರು.

ನಗರಸಭೆ ಅಧ್ಯಕ್ಷ ಈಶ್ವರ ವಾಳೆನ್ನವರ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಅಮೋಘಸಿದ್ಧ ದೇವಸ್ಥಾನದ ಅರ್ಚಕ ರಾಯಪ್ಪ ಪೂಜಾರಿ ಸಾನಿಧ್ಯ ವಹಿಸಿದ್ದರು. ನಗರಸಭೆ ಮಾಜಿ ಸದಸ್ಯ ಪರಮಾನಂದ ಚಿಗರಿ ಉಪಸ್ಥಿತರಿದ್ದರು.

ಸರಸ್ವತಿ ಸಬರದ (ಹೆಗಡಿ), ಗೋಪಾಲ ತುಳಜಾಪೂರ ಸಂಗೀತ ಸೇವೆ ಸಲ್ಲಿಸಿದರು. ಪರಶುರಾಮ ವಾಳೆನ್ನವರ ಸ್ವಾಗತಿಸಿದರು.

ಎಸ್. ವೈ. ಪಾಟೀಲ ನಿರೂಪಿಸಿದರು.

# ಕುರಿಗಾಹಿಗಳ ರಕ್ಷಣೆಗೆ ಸರ್ಕಾರ ಕಾನೂನು ಜಾರಿಗೊಳಿಸಲಿ: ಭರಮೇಶ ತುಂಗಳ

**ರಬಕವಿ-ಬನಹಟ್ಟಿ :** ಕುರಿಗಾಹಿಗಳ ರಕ್ಷಣೆಗೆ ಸರ್ಕಾರ ಕಟ್ಟುನಿಟ್ಟಾದ ಕಾನೂನು ರಚಿಸಿ, ಅದನ್ನು ತಕ್ಷಣ ಅನುಷ್ಠಾನಗೊಳಿಸುವ ಮೂಲಕ ಕುರಿಗಾರರ ರಕ್ಷಣೆಗೆ ಮುಂದಾಗಬೇಕೆಂದು ಭರಮೇಶ ತುಂಗಳ ರಾಜ್ಯ ಸರ್ಕಾರಕ್ಕೆ ಆಗ್ರಹಿಸಿದ್ದಾರೆ.

ಶನಿವಾರ ಸ್ಥಳೀಯ ಕುರಿಗಾಹಿಗಳ ಸಭೆ ನಡೆಸಿ ಮಾತನಾಡಿ ರಾಜ್ಯದ ಶೋಷಿತ ಸಮುದಾಯಗಳು ಮತ್ತು ಹಿಂದುಳಿದ ವರ್ಗಗಳ ಜನರು ಕುರಿಗಾರಿಕೆ ಮೂಲಕ ಕುಟುಂಬದ ಆರ್ಥಿಕ ಸ್ಥಿತಿ ಸರಿದೂಗಿಸುವ ಸಾಂಪ್ರದಾಯಿಕ ಕುಲ ಕಸುಬಾಗಿದ್ದರೂ, ಬೆಟ್ಟಗುಡ್ಡಗಳಲ್ಲಿ ಸ್ಥಳೀಯ ಮತ್ತು ಸಂಚಾರಿ ಕುರಿಗಾಹಿಗಳ ಮೇಲೆ ನಿರಂತರವಾಗಿ ದೌರ್ಜನ್ಯ ನಡೆಯುತ್ತಿದೆ.

ಬಾದಾಮಿ ತಾಲೂಕಿನ ಉಗಲವಾಟದ ಶರಣಪ್ಪ ಜಮ್ಮನಕಟ್ಟಿ, ಬೀದರ ಜಿಲ್ಲೆಯ ಬಸವಕಲ್ಯಾಣ ತಾಲೂಕಿನ ಕುರಿಗಾಯಿ ಪ್ರಭು ಮೇತ್ರೆ ಇವರನ್ನು ಕುರಿಗಳ್ಳರು ಕೊಂದು ಹಾಕಿದ್ದು, ಧಾರವಾಡ ಜಿಲ್ಲೆಯ



ಕುಂದಗೋಳ ತಾಲೂಕಿನ ಲಕ್ಷ್ಮಿ ಕಳ್ಳಿಮನಿ ಎಂಬ ಕುರಿಗಾಹಿ ಮಹಿಳೆಯ ಮೇಲೆ ಅತ್ಯಾಚಾರ ಮಾಡಿ ಕ್ರೂರವಾಗಿ ಕೊಲೆ ಮಾಡಿರುವ ಪ್ರಕರಣಗಳ ಬಳಿಕ ಕುರಿಗಾಹಿಗಳು ಅಸುರಕ್ಷಿತ ಭಾವದಲ್ಲಿದ್ದಾರೆ. ಗುಡ್ಡಗಾಡುಪ್ರದೇಶಗಳಲ್ಲಿಕುರಿಮೇಯಿಸಲು ಅರಣ್ಯ ಇಲಾಖೆ ಸಿಬ್ಬಂದಿಗಳಿಂದ ನಿರಂತರ ಕಿರುಕುಳ, ದೌರ್ಜನ್ಯ ನಡೆಯುತ್ತಿದೆ. ಕುರಿಗಾರಿಕೆ ನಂಬಿ ಬದುಕು ನಡೆಸುವ ಕುರಿಗಾಹಿಗಳ ಬದುಕು ಬೀದಿಗೆ ಬಿದ್ದಿದ್ದು ಕುರಿಗಾಹಿಗಳ ಮೇಲೆ ದುಷ್ಕೃತ್ಯ ನಡೆಸುವವರ ವಿರುದ್ಧ ಕಡಿವಾಣ ಹಾಕಲು ರಾಜ್ಯ ಸರ್ಕಾರ ಸಾಂಪ್ರದಾಯಿಕ ಕುರಿಗಾಹಿಗಳ ಹಿತರಕ್ಷಣಾ ಕಾಯ್ದೆಯನ್ನುತಕ್ಷಣ ಜಾರಿಗೊಳಿಸಲು ಧುರೀಣರು ಒಕ್ಕೊರಲಿನ ಬೆಂಬಲ ನೀಡಿದರು.

ಸಾಂಪ್ರದಾಯಿಕ ಕುರಿಗಾಹಿಗಳ ಹಿತರಕ್ಷಣಾ ಕಾಯ್ದೆ- 2025 ಮಸೂದೆಯನ್ನು ಆಗಸ್ಟ್ 11 ರಂದು ಜಾರಿಗೊಳಿಸಲು ಆಗ್ರಹಿಸಿದ್ದರೂ ಕೂಡ ಅದು ಫಲಕಾರಿಯಾಗದ ಕಾರಣ ಕುರಿಗಾರರ ನಡಿಗೆ ವಿಧಾನಸೌಧದ ಕಡೆಗೆ ಘೋಷ ವಾಕ್ಯದೊಡನೆ

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಇದೇ ಆಗಸ್ಟ 19 ರಂದು ಬೃಹತ್ ಪ್ರತಿಭಟನೆ ಆಯೋಜಿಸಿದ್ದು, ರಾಜ್ಯಾದ್ಯಂತ ಎಲ್ಲ ಕುರಿಗಾಹಿಗಳು, ಶೋಷಿತ ವರ್ಗದವರು, ರೈತ ಮುಖಂಡರು,

ಪ್ರಗತಿಪರ ಚಿಂತಕರು ಪಾಲ್ಗೊಳ್ಳಬೇಕೆಂದು ಕೋರಿದರು.

ಈ ಸಂದರ್ಭದಲ್ಲಿ ಮಲ್ಲಪ್ಪ ಸಿಂಗಾಡಿ, ಹೊನ್ನಪ್ಪ ಬಿರಡಿ, ಮಹಾಲಿಂಗ ಮಾಯನ್ನವರ, ಸಂಜು ಹಾಡಕರ, ಯಲ್ಲಪ್ಪ ತುರಾದಿ, ಬಸವರಾಜ ಹಿಪ್ಪರಗಿ, ಮಲ್ಲೇಶ ತುಂಗಳ, ದೇವಪ್ಪ ಮಹಿಷವಾಡಗಿ ಮೊದಲಾದವರಿದ್ದರು.

# ಡಾ. ಪ್ರಕಾಶ ಖಾಡೆ ಅವರ ಜನಪದ ಕೃತಿ 'ಗ್ರಾಮ್ಯ' ಲೋಕಾರ್ಪಣೆ

**ಬೆಂಗಳೂರು :** ಬಾಗಲಕೋಟೆಯ ಸಾಹಿತಿ ಡಾ. ಪ್ರಕಾಶ ಗ. ಖಾಡೆ ಅವರ ಜನಪದ ಲೇಖನಗಳನ್ನೊಳಗೊಂಡ 'ಗ್ರಾಮ್ಯ' ಗ್ರಂಥದ ಲೋಕಾರ್ಪಣೆಯು ಆಗಸ್ಟ್ 16 ರಂದು ಬೆಂಗಳೂರಿನಲ್ಲಿ ಜರುಗಿತು. ಮೇಘಮೈತ್ರಿ ಕನ್ನಡ ಸಾಹಿತ್ಯ ಸಂಘ ಮತ್ತು ಕನ್ನಡ ಜಾನಪದ ಪರಿಷತ್ತು ಶಾಂತಿನಗರ ವಿಧಾನಸಭಾ ಕ್ಷೇತ್ರ ಅವರ ಸಹಯೋಗದಲ್ಲಿ ಪುನೀತ ರಾಜಕುಮಾರ ಕನ್ನಡ ಭವನದಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷ, ಹಿರಿಯ ಸಾಹಿತಿ ಡಾ. ಬೈರಮಂಗಲ ರಾಮೇಗೌಡ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ 'ಜಾನಪದಕ್ಕೆ ಉತ್ತರ ಕರ್ನಾಟಕವು ಸಮೃದ್ಧ ನೆಲೆಯಾಗಿದೆ. ಆ ಭಾಗದ ಖಾಡೆ ಮನೆತನದ ಜಿ. ಬಿ. ಖಾಡೆ ಮತ್ತು ಅವರ ಪುತ್ರ ಡಾ. ಪ್ರಕಾಶ ಖಾಡೆ ಅವರು ಕಳೆದ ಐದು ದಶಕಗಳಿಂದ ಜಾನಪದ ಸಾಹಿತ್ಯ ಸಂಗ್ರಹ,



ಸಂಪಾದನೆ ಮತ್ತು ಸಂಶೋಧನೆಯಲ್ಲಿ ಮಾಡಿದ ಕೆಲಸ ದಾಖಲಾರ್ಹವಾಗಿದೆ. ಈಗ ಬಿಡುಗಡೆಯಾಗಿರುವ ಗ್ರಾಮ್ಯ ಕೃತಿಯು ಹೊಸ ತಲೆಮಾರಿನ ಓದುಗರಲ್ಲಿ ಜಾನಪದದ ಅರ್ಥ ತಿಳುವಳಿಕೆಯನ್ನು ಹೆಚ್ಚಿಸುತ್ತದೆ ಎಂದರು. ಲೇಖಕಿ ಶಾಂತಿ ವಾಸು 'ಗ್ರಾಮ್ಯ' ಕೃತಿ ಬಿಡುಗಡೆ ಮಾಡಿ 'ಜನಪದ ಸಂಸ್ಕೃತಿಯ ತಾಯಿ ಬೇರುಗಳು ನಮ್ಮ ಪರಂಪರೆಯ ದೊಡ್ಡ ಆಸ್ತಿಯಾಗಿದ್ದು ಅವುಗಳನ್ನು ಹೊಸ ದೃಷ್ಟಿಕೋನದಿಂದ ನೋಡಿದ ಇಲ್ಲಿನ ಲೇಖನಗಳು ಡಾ. ಖಾಡೆ ಅವರ ಕ್ಷೇತ್ರ ಕಾರ್ಯ ಮತ್ತು ಆಳವಾದ ಅಧ್ಯಯನದ ಪ್ರತೀಕಗಳಾಗಿವೆ' ಎಂದರು. ಎಂ. ವಿ. ಷಡಕ್ಷರಿ ಕೃತಿ ಕುರಿತು ಮಾತನಾಡಿದರು. ಮೇಘಮೈತ್ರಿ ಸಾಹಿತ್ಯ ಸಂಘದ ಅಧ್ಯಕ್ಷ ರಮೇಶ ಕಮತಗಿ ಆಶಯ ನುಡಿ ಹೇಳಿದರು. ಸಾಹಿತಿ ಡಾ. ರಾಮಲಿಂಗೇಶ್ವರ ಸಿಸಿರಾ ಅಧ್ಯಕ್ಷತೆ ವಹಿಸಿದ್ದರು.

ಕಾವ್ಯ ಸ್ಪಂದನ ಪ್ರಕಾಶಕ ಭದ್ರಾವತಿ ರಾಮಾಚಾರಿ, ಜಾನಪದ ಪರಿಷತ್ತು ಅಧ್ಯಕ್ಷ ಡಾ.ಎನ್.ಆರ್.ಮಂಜುನಾಥ, ಡಾ.ನೀರಜಾ ನಾಗೇಂದ್ರಕುಮಾರ, ಡಾ. ಸಂಗಮೇಶ ಗಣಿ ಅತಿಥಿಗಳಾಗಿದ್ದರು. ಲೇಖಕರೊಂದಿಗೆ ಸಂವಾದ ಮತ್ತು ಪ್ರಶಸ್ತಿ ಪ್ರದಾನ ಜರುಗಿತು. ಕೆ. ಎಂ. ರೇವಣ್ಣ, ಮಹಮ್ಮದ್ ಮುನಾಫ, ಅಂಬುಜಾ ಪ್ರಕಾಶ, ಅಂಬುಜಾಕ್ಷಿ ಬಿರೇಶ, ಪ್ರಕಾಶ ಸಾಗರ, ಶೋಭಾ ಕನ್ನಡತಿ, ತೇಜಸ್ವಿನಿ ಪಾಲ್ಗೊಂಡಿದ್ದರು. ಡಾ. ಮಂಜುಳಾ ಸಾಗರ ನಿರೂಪಿಸಿ ವಂದಿಸಿದರು.

# ಶ್ವೇತಾ ನಾಗರಾಜ್ ರಾಜ್ಯ ಮಟ್ಟದ ಯುವ ಪ್ರಶಸ್ತಿಗೆ ಆಯ್ಕೆ

**ಬೆಂಗಳೂರು :** ಕಲಾ ಸೇವಾ, ಅನಿಕೇತನ,ಕನ್ನಡವೈಭವ,ಕಿತ್ತೂರು ರಾಣಿ ಚೆನ್ನಮ್ಮ ಹಾಗೂ ಕರುನಾಡ ಕಣ್ಮಣಿ ಪ್ರಶಸ್ತಿ ಪುರಸ್ಕೃತರು, ಶ್ವೇತಾಂಜಲಿ ಭರತನಾಟ್ಯ ಶಾಲೆ ಹಾಗೂ ವಿಶ್ವಮಾನವ ಕುವೆಂಪು ಫೌಂಡೇಶನ್, ವಿ.ಕೆ.ಎಫ್. ಸಂಸ್ಥಾಪಕ ಅಧ್ಯಕ್ಷೆ ಶ್ರೀಮತಿ ಶ್ವೇತಾ ನಾಗರಾಜ್ ಅವರನ್ನು ಕರ್ನಾಟಕ ಯುವ ಸಂಘ-ಸಂಸ್ಥೆಗಳ ಒಕ್ಕೂಟವು "ರಾಜ್ಯ ಯುವ ಪ್ರಶಸ್ತಿಗೆ" ಆಯ್ಕೆ ಮಾಡಲಾಗಿದೆ.

ಭರತನಾಟ್ಯ ಕ್ಷೇತ್ರದ ಸಾಧಕಿ, ಸಂಸ್ಕೃತಿಯ ಸಂರಕ್ಷಕಿ



ಶ್ರೀಮತಿ ಶ್ವೇತಾ ನಾಗರಾಜ್ ಅವರ ಅನುಪಮ ರಕ್ತದಾನ, ಸಮಾಜಸೇವೆ ಪರಿಗಣಿಸಿ ಆಗಸ್ಟ್ 20ರಂದು ಬೆಳಿಗ್ಗೆ 10ಕ್ಕೆ ಬೆಂಗಳೂರಿನ ಟೌನ್ ಹಾಲ್ ಬಳಿಯ ಸರ್. ಪುಟ್ಟಣ್ಣಶೆಟ್ಟಿ ಪುರಭವನದಲ್ಲಿ ನಡೆಯಲಿರುವ ಯುವಜನರ ನಡಿಗೆ-ರಾಷ್ಟ್ರೀಯತೆಯ ಕಡೆಗೆ ಯುವ ಸಮ್ಮೇಳನದಲ್ಲಿ ಕರ್ನಾಟಕ ರಾಜ್ಯ ವಿಧಾನ ಪರಿಷತ್ತಿನ ಸಭಾಪತಿಗಳಾದ ಬಸವರಾಜ ಹೊರಟ್ಟಿ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಈ ಬಗ್ಗೆ ಗೌರವ ಅಧ್ಯಕ್ಷ ವಿನಯ್ ಕುಮಾರ್ ಸೋನಾರೆ, ಗೌರವ ಕಾರ್ಯಾಧ್ಯಕ್ಷ ಪ್ರಕಾಶ್ ಅಂಗಡಿ, ಅಧ್ಯಕ್ಷ ಶಿವಕುಮಾರ್. ಹೆಚ್. ಎಂ. ಹಾಗೂ ಪ್ರಧಾನ ಕಾರ್ಯದರ್ಶಿ ಫಣೀಂದ್ರ ಪ್ರಸಾದ್ ರವರು ತಿಳಿಸಿದ್ದಾರೆ.

# ತೇರದಾಳದಲ್ಲಿ ಪ್ರಭುಜ್ಯೋತಿ ಉತ್ಸವ

**ತೇರದಾಳ:** ಪಟ್ಟಣದ ಆರಾಧ್ಯದೈವ ಅಲ್ಲಮ ಪ್ರಭುದೇವರ ಜಾತ್ರಾ ಮಹೋತ್ಸವದ ಮುನ್ನಾದಿನವಾದ ಭಾನುವಾರ ಪ್ರಭು ಜ್ಯೋತಿ ಉತ್ಸವ ಭಕ್ತಿಯಿಂದ ಜರುಗಿತು.

ಸಂಪ್ರದಾಯದಂತೆ ವಿರಕ್ತಮಠದಿಂದ ಪ್ರಾರಂಭಗೊಂಡ ಜ್ಯೋತಿಯಾತ್ರೆ ವಾದ್ಯ ಮೇಳಗಳೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಪ್ರಭುದೇವರ ದೇವಸ್ಥಾನ ತಲುಪಿತು.

ಮುತ್ತೈದೆಯರ ಕುಂಭ ಹಾಗೂ ಆರತಿ ಉತ್ಸವಕ್ಕೆ ಮೆರಗು ನೀಡಿದವು. ಇತ್ತ ಉತ್ಸವ ನಡೆಯುವ ಬೀದಿಗಳಲ್ಲಿ ಬಿಡಿಸಿದ ರಂಗೋಲಿ ಸ್ವಾಗತ ಕೋರಿದವು. ನಂತರ ಪ್ರಭುಲಿಂಗೇಶ್ವರ ಅನ್ನಪ್ರಸಾದ ಸಮಿತಿ ನಡೆಸುವ ದಾಸೋಹಕ್ಕೆ ಹರಗುರು ಚರಮೂರ್ತಿಗಳು ಚಾಲನೆ ನೀಡಿದರು. ಅಲ್ಲಮ ಪ್ರಭುದೇವರ ಜಾತ್ರಾ ಮಹೋತ್ಸವ ನಿಮಿತ್ಯ ಸುಮಾರು 30 ವರ್ಷಗಳಿಂದ ಅನ್ನಪ್ರಸಾದ ಸಮಿತಿ ಹಾಗೂ ಸದ್ಭಕ್ತರು ನಡೆಸುತ್ತಿರುವ ದಾಸೋಹ ಕಾರ್ಯಕ್ಕೆ ಹಾಗೂ ಸಮಿತಿಯವರ ನಿಸ್ವಾರ್ಥ ಸೇವೆಯನ್ನು ಕಾರ್ಯಕ್ರಮದಲ್ಲಿ ಪಾಲ್ಗೊಂಡ ಶ್ರೀಗಳು ಹಾಗೂ ಮುಖಂಡರು ಬಣ್ಣಿಸಿದರು.

# ಪ್ರವಚನಕಾರರ ದಿನವೆಂದು ಆಚರಿಸಿ



**ರಬಕವಿ-ಬನಹಟ್ಟಿ :** ಪ್ರತಿ ವರ್ಷ ಜನೆವರಿ ಎರಡು ವಿಜಯಪುರದ ಜ್ಞಾನಯೋಗಾಶ್ರಮದ ಸಿದ್ಧೇಶ್ವರ ಸ್ವಾಮೀಜಿಯರ ಪುಣ್ಯ ಸ್ಮರಣೆಯ ದಿನವಾಗಿದ್ದು , ಅವರ ಸ್ಮರಣೆಯ

ಅಂಗವಾಗಿ ಸರ್ಕಾರ ಆ ದಿನವನ್ನು "ಪ್ರವಚನಕಾರರ ದಿನ" ವನ್ನಾಗಿ ಆಚರಿಸಬೇಕು ಎಂದು ಪತ್ರಕರ್ತ ಕಿರಣ ಆಳಗಿ ತಿಳಿಸಿದರು.

ಅವರು ಶನಿವಾರ ಇಲ್ಲಿನ ತಹಶೀಲ್ದಾರ್ ಕಚೇರಿಯಲ್ಲಿ ಶಾಸಕ ಸಿದ್ದು ಸವದಿ ಮತ್ತು ತಹಶೀಲ್ದಾರ್ ಗಿರೀಶ ಸ್ವಾದಿಯವರಿಗೆ ಮನವಿ ಸಲ್ಲಿಸಿ ಮಾತನಾಡಿದರು.

ಪೂಜ್ಯಸಿದ್ಧೇಶ್ವರಸ್ವಾಮೀಜಿದೇಶವಿದೇಶಗಳಲ್ಲಿಹಾಗೂ ಕರ್ನಾಟಕದ ಪ್ರತಿಯೊಂದು ಪ್ರಮುಖ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ತಮ್ಮ ಪ್ರವಚನಗಳ ಮೂಲಕ ಜನರನ್ನು ತಿದ್ದಿ ತೀಡುವ ಕಾರ್ಯವನ್ನು ಮಾಡಿದ್ದಾರೆ. ಅವರು ವಿಶ್ವ ಕಂಡ ಶ್ರೇಷ್ಠ ಪ್ರವಚನಕಾರರಾಗಿದ್ದರು. ಅವರ ಪುಣ್ಯ ಸ್ಮರಣೆಯ ದಿನವನ್ನು ಪ್ರವಚನಕಾರರ ದಿನವನ್ನಾಗಿ ಆಚರಣೆ ಮಾಡಬೇಕು ಎಂದು ಕಿರಣ ಆಳಗಿ ಆಗ್ರಹಿಸಿದರು.

ಮನವಿ ಸ್ವೀಕರಿಸಿದ ಶಾಸಕ ಸಿದ್ದು ಸವದಿ, ಈ ಕುರಿತು ಅಧಿವೇಶನದಲ್ಲಿ ಚರ್ಚೆ ಮಾಡುವುದಾಗಿ ತಿಳಿಸಿದರು. ಈ ಸಂದರ್ಭದಲ್ಲಿ ವಿಶ್ವಜ ಕಾಡದೇವರ, ರಬಕವಿ ಬನಹಟ್ಟಿ ನಾಗರಿಕರು ಭಾಗವಹಿಸಿದ್ದರು.

# ನಿರಾಣಿ ಪರಿವಾರಕ್ಕೆ ಭೋಜನಮ್ ದರ್ಶನಮ್ ನಿರತಮ್ ಆರ್ಶೀವಾದ

**ಜಮಖಂಡಿ :** ತಾಲೂಕಿನ ಹಿಪ್ಪರಗಿಯ ಸಂಗಮೇಶ್ವರ ದೇವಸ್ಥಾನದ ಆವರಣದಲ್ಲಿ ಎಂ.ಆರ್.ಎನ್. ಫೌಂಡೇಶನ ಮತ್ತು ರೈತ ಸೇವಾ ಸಮಿತಿ ಸಹಯೋಗದಲ್ಲಿ ಕೃಷ್ಣಾನದಿ ತೀರದಲ್ಲಿ ನಾಗಾಸಾಧುಗಳ ಮತ್ತು ಕಾಶಿ ವಿಶ್ವನಾಥ ಅರ್ಚಕರ ನೇತೃತ್ವದಲ್ಲಿ ಕೃಷ್ಣಾ ಪುಣ್ಯಸ್ನಾನ, ಕೃಷ್ಣಾರತಿ ಮತ್ತು ಮಾಜಿ ಸಚಿವ ಮುರುಗೇಶ ನಿರಾಣಿ ಅವರ ಅರವತ್ತನೇ ವರ್ಷದ ಸಂಭ್ರಮದ ಹುಟ್ಟುಹಬ್ಬ ಆಚರಣೆ ಸಹಿತ ಸಾಧು ಸಂತರಿಗೆ ಸಾಮೂಹಿಕ ದಾಸೋಹ ನಡೆಯಿತು.





ಸಂಗಮೇಶ್ವರ ದೇವಸ್ಥಾನದ ಪ್ರಸಾದ ನಿಲಯದಲ್ಲಿ ಹರಿಹರ ಪಂಚಮಸಾಲಿ ಪೀಠದ ಜಗದ್ಗುರು ವಚನಾನಂದ ಶ್ರೀಗಳು, ನಾಗಾಸಾಧು ಅಖಾಡ ಮುಖ್ಯಸ್ಥ ದೇವನಂದಗಿರಿ ಬಾಬಾ, ಪ. ಪೂ. ಸಿದ್ಧರಾಮೇಶ್ವರ ಶ್ರೀಗಳು, ಹುಕ್ಕೇರಿಯ ಚಂದ್ರಶೇಖರ ಶ್ರೀಗಳು, ನಿಡಸೋಸಿಯ ಶ್ರೀಗಳು, ಹಿಪ್ಪರಗಿಯ ಪ್ರಭುಜಿ ಮಹಾರಾಜರು, ಮಾಜಿ ಸಚಿವ ಮುರುಗೇಶ ನಿರಾಣಿ ಧರ್ಮಪತ್ನಿ ಕಮಲಾ, ಲಕ್ಷ್ಮಣ ನಿರಾಣಿ ಧರ್ಮಪತ್ನಿ ಜ್ಯೋತಿ, ವಿಧಾನ ಪರಿಷತ್ ಸದಸ್ಯ ಹಣಮಂತ ನಿರಾಣಿ ಧರ್ಮಪತ್ನಿ ಶೋಭಾ ಮತ್ತು ಎಂ.ಆರ್. ಎನ್. ಸಮೂಹ ಸಂಸ್ಥೆಗಳ ನಿರ್ದೇಶಕ ಸಂಗಮೇಶ ನಿರಾಣಿ ಧರ್ಮಪತ್ನಿ ದ್ರಾಕ್ಷಾಯಣಿ ದಂಪತಿ ಸಮೇತರಾಗಿ ಸಾಮೂಹಿಕ ದಾಸೋಹದಲ್ಲಿ ಪ್ರಸಾದ ಸ್ವೀಕರಿಸಿದರು.

ಸಾಮೂಹಿಕವಾಗಿ ಸಾಧು ಸಂತರ ದಾಸೋಹದಲ್ಲಿ ದೇಶದ ವಿವಿಧ ಭಾಗಗಳಿಂದ ಆಗಮಿಸಿದ ಇಪ್ಪತ್ತೈದಕ್ಕೂ ಹೆಚ್ಚು ಜನ ನಾಗಾ ಸಾಧುಗಳು, ಇನ್ನೂರಕ್ಕೂ ಹೆಚ್ಚು ಮಠಾಧೀಶರು,

ಶ್ರೀಗಳು, ಶರಣರು, ಪುರೋಹಿತರು, ಸಾಧು

> **ತಾಲೂಕಿನ ಹಿಪ್ಪರಗಿಯ ಸಂಗಮೇಶ್ವರ ದೇವಸ್ಥಾನದ ಆವರಣದಲ್ಲಿ ರೈತರ ಸಹಯೋಗದಲ್ಲಿ ಪ್ರತಿವರ್ಷ ಕೃಷ್ಣಾನದಿಗೆ ಕೃಷ್ಣಾರತಿ ಸಹಿತ ವಿವಿಧ ಕಾರ್ಯಕ್ರಮಗಳು ನಿರಂತರವಾಗಿ ನಡೆಯಲಿವೆ. ಇದು ಮುಂದೆ ಸರಕಾರದ ಕಾರ್ಯಕ್ರಮ ಆಗುವ ಸಾಧ್ಯತೆಯಿದೆ. ಮುಂದಿನ ವರ್ಷದ ಕೃಷ್ಣಾರತಿಯಲ್ಲಿ ನಾಗಾಸಾಧುಗಳು, ಸಂತರು, ಮಠಾಧೀಶರು, ಶ್ರೀಗಳು, ಶರಣರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಲಿದ್ದಾರೆ. ನಿರಾಣಿ ಪರಿವಾರ ರೈತರ ಜೊತೆಯಾಗಿ ಕೆಲಸ ಮಾಡುತ್ತದೆ. ನಾಗಾ ಸಾಧುಗಳು, ಶ್ರೀಗಳು, ಮಠಾಧೀಶರು, ಶರಣರ ಜೊತೆಗೆ ಕುಳಿತುಕೊಂಡು ಸಾಮೂಹಿಕ ದಾಸೋಹದಲ್ಲಿ ಪ್ರಸಾದ ಸ್ವೀಕರಿಸಿದ್ದು, ನನ್ನ ಜೀವನದಲ್ಲಿ ಮರೆಯಲಾರದ ಕ್ಷಣವಾಗಿದೆ.**
>
> **। ಮುರುಗೇಶ ನಿರಾಣಿ, ಮಾಜಿ ಸಚಿವರು.**

ಸಂತರು ಪ್ರಸಾದ ಸವಿಯುವ ಸಂದರ್ಭದಲ್ಲಿ ನೆರೆದಿದ್ದ ಮಹಂತರು ನಿರಾಣಿ ಪರಿವಾರಕ್ಕೆ ಅನ್ನ ಭೋಜನಮ್ ದರ್ಶನಮ್ ನಿರತಮ್ ಎಂಬ ಆರ್ಶೀವಾದ ನೀಡುವ ಮೂಲಕ ಸಾಮೂಹಿಕ ದಾಸೋಹ ಪಂಕ್ತಿ ಆರಂಭಗೊಂಡಿತು.

ಕೃಷ್ಣಾರತಿ ನಿರಂತರ ನಡೆಯಲಿದೆ.

# ಸಾರ್ವಜನಿಕರಿಗೆ ತೊಂದರೆಯಾಗದಿರಲಿ

**ಹುನಗುಂದ:** ಸರ್ಕಾರದ ನಿಯಮದಂತೆ ಹುನಗುಂದ ತಾಲೂಕಿಗೆ ತಹಶೀಲ್ದಾರನಾಗಿ ಸೇವೆ ಮಾಡಲು ಬಂದಿದ್ದೇನೆ. ನನ್ನ ಕಾಲಾವಧಿಯಲ್ಲಿ ಸಾರ್ವಜನಿಕ ರಂಗದಲ್ಲಿ ಯಾವುದೆ ತೊಂದರೆಯಾಗದಂತೆ ಕಚೇರಿ ಕೆಲಸದಲ್ಲಿ ವಿನಾಕಾರಣ ತಡೆಯಾಗದಂತೆ ನನ್ನ ಸಿಬ್ಬಂದಿಯೊಂದಿಗೆ ಕೆಲಸ ಕಾರ್ಯ ನಿರ್ವಹಣೆ ಮಾಡುತ್ತೇನೆಂದು ನೂತನ ತಹಶೀಲ್ದಾರ ಪ್ರದೀಪಕುಮಾರ ಹಿರೇಮಠ ಹೇಳಿದರು. ನಗರಕ್ಕೆ ವರ್ಗವಾಗಿ ಬಂದ ನೂತನ ತಹಶೀಲ್ದಾರ ಮತ್ತು ಪಿಎಸ್ಐ ಗಳಿಗೆ ಗಚ್ಚಿನಮಠದಲ್ಲಿ ಹಮ್ಮಿಕೊಂಡ ಗೌರವ ಸನ್ಮಾನ ಸಮಾರಂಭದಲ್ಲಿ ಸನ್ಮಾನಗೊಂಡು ಅವರು ಮಾತನಾಡುತ್ತ, ತಾಲೂಕಿನಲ್ಲಿ ಕಾರ್ಯ ನಿರ್ವಹಿಸುವ ಕಾಲಾವಧಿಯವರೆಗೆ ಸಾವ9ಜನಿಕರಿಗೆ ಯಾವುದೆತೊಂದರೆಯಾಗದಂತೆಸದಾಕಾಲಕಾರ್ಯ ನಿರ್ವಹಿಸುವದಾಗಿ ತಿಳಿಸುತ್ತ ಚಿತ್ತರಗಿ ಸಂಸ್ಥಾನಮಠ ಹುನಗುಂದದ ಶ್ರೀ ವಿಜಯ ಮಹಾಂತೇಶ ಮತ್ತು ಅಮರೇಶ್ವರ ದೇವರುಗಳ ಆಶೀರ್ವಾದ ಎಲ್ಲರಿಗೂ ಇರಲಿ ಎಂದು 79 ನೇ ಸ್ವಾತಂತ್ರ್ಯೋತ್ಸವ ಹಬ್ಬಕ್ಕೆ ತಹಶೀಲ್ದಾರ ಶುಭ ಹಾರೈಸಿದರು.

ಪಿ.ಎಸ್.ಐ. ಸಿದ್ದಾರೂಢ ಅರಳಿಕಟ್ಟಿ ಮಾತನಾಡಿ, ಸಾರ್ವಜನಿಕ ಕ್ಷೇತ್ರದಲ್ಲಿ ನಡೆಯುವಂತ ಧಾರ್ಮಿಕ ಚಟುವಟಿಕೆಗಳಿಗೆ ಪೊಲೀಸ್ ಇಲಾಖೆ ಸಂಪೂರ್ಣ ಸಹಕರಿಸುತ್ತದೆ.

ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ವರ್ಷದುದ್ದಕ್ಕೂ ನಡೆಯುವಂಥ ಆಚರಣೆ, ರಾಷ್ಟ್ರೀಯ ಮತ್ತು ಸಂಪ್ರದಾಯದಂತೆ ನಡೆಸುವ ಹಬ್ಬ ಹರಿದಿನಗಳಲ್ಲಿ ಯಾವುದೆ ಅಹಿತಕರ ಘಟನೆಗಳು ನಡೆಯದಂತೆ, ಎಲ್ಲ ಹಬ್ಬಗಳನ್ನು ಸರ್ವ ಧರ್ಮಿಯರು ಸೇರಿ ಪ್ರೀತಿ ವಿಶ್ವಾಸದಿಂದ ಸೌಹಾರ್ಧಯುತವಾಗಿ ನಡೆಸುವಲ್ಲಿ, ನಗರ ಗ್ರಾಮದ ಹಿರಿಯರು ಹೆಚ್ಚಿನ ಜವಾಬ್ದಾರಿ ವಹಿಸಬೇಕು. ಹಾಗೆಯೆ ಪೂಜ್ಯರು ಮತ್ತು ಮಠಾಧೀಶರು ಹಾಗೂ ಜಂಗಮರು ನಡೆಸುವ ಧರ್ಮ ಕಾರ್ಯಗಳಲ್ಲಿ ಯುವಕರು ಪಾಲ್ಗೊಂಡು ಸಂಸ್ಕಾರವಂತರಾಗಿ ಸಮಾಜದಲ್ಲಿ ಉತ್ತಮ ವ್ಯಕ್ತಿಯಾಗಬೇಕೆಂದರು.

ಗಚ್ಚಿನಮಠದ ಅಮರೇಶ್ವರ ದೇವರು ಸಾನಿಧ್ಯವಹಿಸಿ ಮಾತನಾಡುತ್ತ, ಪ್ರತಿ ಇಲಾಖೆಯ ಅಧಿಕಾರಿಗಳು ಸಂವಿಧಾನದಡಿ ಸರ್ಕಾರಿ ನಿಯಮದಂತೆ ಸೇವೆ ಸಲ್ಲಿಸುತ್ತಾರೆ.

ಮನುಷ್ಯತ್ವದಿಂದ ಕಾರ್ಯ ನಿರ್ವಹಿಸಲು ಅಧಿಕಾರಿಗಳ ಹೃದಯ ಮಿಡಿಯುತ್ತಿರುತ್ತದೆ. ಆದರೆ ಒಂದೊಂದು ಸಂದರ್ಭದಲ್ಲಿ ಅವರಿಗೂ ಕಾನೂನಿನ ಅಡತಡೆ ಬಂದಾಗ ಅವರ ಮತ್ತು ಸಾರ್ವಜನಿಕರ ಮಧ್ಯ ಭಿನ್ನಾಭಿಪ್ರಾಯ ಸಂಭವಿಸುವುದು ಸಹಜ. ಹುನಗುಂದ ಭಾಗದಲ್ಲಿ ಹೆಚ್ಚಾಗಿ ರೈತಾಪಿ ವರ್ಗದ ಜನ ಇರುವದರಿಂದ ಅವರ ಕೆಲಸ ಕಾರ್ಯಗಳನ್ನು ತೀವ್ರವಾಗಿ ಮಾಡಲು ಪೂಜ್ಯರು ಆಶಿಸಿದರು.

ಗಚ್ಚಿನಮಠದ ವೇ.ಮೂ. ಮಹಾಂತಯ್ಯ ಗಚ್ಚಿನಮಠ ದಿವ್ಯ ಸಾನಿಧ್ಯ ವಹಿಸಿದ್ದರು. ನಗರದ ಸಂಗಮೇಶ್ವರ ದೇವಸ್ಥಾನದ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಶೇಖರಪ್ಪ ಬಾದವಾಡಗಿ, ಪಿಡಬ್ಲ್ಯೂಡಿ ಅಭಿಯಂತರ ವೀರೇಶ ಹಿರೇಮಠ ಉಪಸ್ಥಿತರಿದ್ದರು. ಮಠದ ಸದ್ಭಕ್ತರಾದ ಶಾಂತಪ್ಪ ಹೊಸಮನಿ, ನಾಗಪ್ಪ ತ್ಯಾಪಿ, ಗಿರಿಮಲ್ಲಪ್ಪ ಹಳಪೇಟಿ, ಕೃಷ್ಣ ಜಾಲಿಹಾಳ, ಮಲ್ಲು ಲೆಕ್ಕಿಹಾಳ, ಶಿವಪ್ಪ ಯಡಹಳ್ಳಿ, ಮಹಾಂತೇಶ ಚಿತ್ತವಾಡಗಿ, ಮಹೇಶ, ಸಂಗಮೇಶ ಚೂರಿ, ರಾಜು ಬಯ್ಯಾಪೂರ, ಸುರೇಶ ಹಳಪೇಟಿ, ಶಾಂತಯ್ಯ ಮಠ, ಮಹಾಂತೇಶ ಮಠ ಸ್ವಾಗತಿಸಿದರು. ಅರುಣ ದುದ್ಗಿ ನಿರೂಪಿಸಿದರು. ಶಿಕ್ಷಕ ಪ್ರಭು ಮಾಲಗತ್ತಿಮಠ ವಂದಿಸಿದರು.

# ಸ್ಮಾರ್ಟ್‌ಕ್ಲಾಸ್, ಶುದ್ಧ ಜಲ ಕೇಂದ್ರ ಉದ್ಘಾಟನೆ



**ಚಿಮ್ಮಡ :** ಗ್ರಾಮದಲ್ಲಿ ಅನುದಾನಿತ ಪಿ. ಪಿ. ಮಾಳಿಗಡ್ಡಿಮಠದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸ್ಮಾರ್ಟ್‌ಕ್ಲಾಸ್ ಹಾಗೂ ಶುದ್ಧ ಕುಡಿಯುವ ನೀರಿನ ಘಟಕದ ಉದ್ಘಾಟನಾ ಕಾರ್ಯಕ್ರಮ ಅದ್ದೂರಿಯಾಗಿ ನಡೆಯಿತು. ಈ ಶಾಲೆಯಲ್ಲಿ ಕಲಿತು ಉನ್ನತ ಸ್ಥಾನಗಳಲ್ಲಿ ಸೇವೆ ಸಲ್ಲಿಸುತ್ತಿರುವ ಈ ಶಾಲೆಯ ಹಳೆಯ ವಿದ್ಯಾರ್ಥಿಗಳು ಸೇರಿ ಲಕ್ಷಾಂತರ ರೂ. ಗಳ ವೆಚ್ಚದಲ್ಲಿ ತಾವು ಕಲಿತ ಶಾಲೆಯಲ್ಲಿ ಮಕ್ಕಳಿಗೆ ಉನ್ನತ ಬೋಧನಾ ಪರಿಕರವಾದ ಸ್ಮಾರ್ಟ್‌ಬೋರ್ಡ, ಸ್ಮಾರ್ಟ ಡೆಸ್ಕ ಸೇರಿದಂತೆ ಆಧುನಿಕಕಲಿಕಾತರಗತಿಗಳಿಗೆಅವಶ್ಯವಿರುವ ಎಲ್ಲ ಪರಿಕರ ಮತ್ತು ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಿಸಲಾಗಿದ್ದು, ಅದರ ಉದ್ಘಾಟನಾ ಕಾರ್ಯಕ್ರಮ ಶನಿವಾರ ನಡೆಯಿತು.

ಸಮಾರಂಭದ ಸಾನಿಧ್ಯವನ್ನು ಸ್ಥಳಿಯ ವಿರಕ್ತಮಠದ ಪ್ರಭು ಸ್ವಾಮಿಗಳು ವಹಿಸಿದ್ದರು. ಉದ್ಘಾಟನೆಯನ್ನು ಪ್ರಭುಲಿಂಗೇಶ್ವರ ಸೇವಾ ಸಮಿತಿಯ ಅಧ್ಯಕ್ಷರಾದ ರಾಮಣ್ಣ ಮುಗಳಖೋಡ ನೆರವೇರಿಸಿದರು. ಪ್ರಮುಖರಾದ ಮುಂಡಲಿಕಪ್ಪ ಪೂಜಾರಿ, ಬಾಳಪ್ಪ ಹಳಿಂಗಳಿ, ಅಣ್ಣಪ್ಪಗೌಡ ಪಾಟೀಲ, ಗುರಪ್ಪಾ ಬಳಗಾರ, ಬಿ. ಎಸ್. ಪಾಟೀಲ, ಚಂದ್ರಕಾಂತ ಜಾಡಗೌಡರ, ಈಶ್ವರ ಬಡಿಗೇರ ಸೇರಿದಂತೆ ಇನ್ನೂ ಹಲವು ಪ್ರಮುಖರು ಉಪಸ್ಥಿತರಿದ್ದರು. ಶಾಲೆಯ ಮುಖ್ಯ ಗುರುಮಾತೆ ಶ್ರೀಮತಿ ಸರೋಜಿನಿ ಡಿ. ಹಿರೇಮಠ ಸೊಗಸಾಗಿ ನಿರ್ವಹಿಸಿದರು.

# ಕೃಷ್ಣಾರತಿ ಸಂಗೀತೋತ್ಸವದಲ್ಲಿ ಕಲಾವಿದರ ಅಮೋಘ ಪ್ರದರ್ಶನ









**ಜಮಖಂಡಿ :** ತಾಲೂಕಿನ ಹಿಪ್ಪರಗಿಯ ಸಂಗಮೇಶ್ವರ ದೇವಸ್ಥಾನದ ಆವರಣದಲ್ಲಿ ಎಂ.ಆರ್.ಎನ್. ಫೌಂಡೇಶನ ಮತ್ತು ರೈತ ಸೇವಾ ಸಮಿತಿ ಸಹಯೋಗದಲ್ಲಿ ಕೃಷ್ಣಾನದಿ ತಟದಲ್ಲಿ ನಾಗಾಸಾಧುಗಳ ಮತ್ತು ಕಾಶಿ ವಿಶ್ವನಾಥ ಅರ್ಚಕರ ನೇತೃತ್ವದಲ್ಲಿ ಕೃಷ್ಣಾ ಪುಣ್ಯಸ್ನಾನ, ಕೃಷ್ಣಾರತಿ ಮತ್ತು ಮಾಜಿ ಸಚಿವ ಮುರುಗೇಶ ನಿರಾಣಿ ಅವರ ಅರವತ್ತನೇ ವರ್ಷದ ಹುಟ್ಟುಹಬ್ಬ ಆಚರಣೆ, ಸಾಮೂಹಿಕ ದಾಸೋಹ ಮತ್ತು ಸಂಗೀತೋತ್ಸವ ನಡೆಯಿತು.

ರಾಜ್ಯಮಟ್ಟದ ಕಲಾವಿದರಾದ ವಿಜಯಪುರದ ಬಿಸ್ಲಾ ಅಕಾಡೆಮಿ ಮತ್ತು ಧಾರವಾಡದ ವಾಣಿ ಹರಡಕರ, ಶ್ರೀಧರ ತಂಡದ ಸುಗಮ ಸಂಗೀತ ಸವಿಗಾನಗಳು ಎಲ್ಲರ ಗಮನ ಸೆಳೆಯಿತು. ಗದಗದ ಗಾನಯೋಗಿ ವೀರಶೈವ ಪುಣ್ಯಾಶ್ರಮ ತಂಡದಿಂದ ವಿಶೇಷ ಗಾಯನ ನಡೆಯಿತು. ನೃತ್ಯ ಮತ್ತು ಗಾಯನದಲ್ಲಿ ಇನ್ನೂರಕ್ಕೂ ಹೆಚ್ಚು ಕಲಾವಿದರು ತಮ್ಮ ಪ್ರತಿಭೆ ಪ್ರದರ್ಶಿಸಿದರು.

ಮಹಿಷಾಸುರ ಮರ್ದಿನಿ, ರೇಣುಕಾ ಎಲ್ಲಮ್ಮಾ, ಕೃಷ್ಣನ ಮಹಿಮೆ ಆರಾಧನೆ, ಶಾಸ್ತ್ರಿಯ ಸಂಗೀತದ ಹಾಡುಗಳು ನೆರೆದಿದ್ದ ಸಾವಿರಾರು ಜನರ ಮನ ರಂಜಿಸಿದವು. ಅಂದಾಜು 13 ಭಕ್ತಿ ಹಾಡುಗಳಿಗೆ ನೃತ್ಯ ಕಲಾವಿದರು ನೃತ್ಯ ಗಮನ ಸೆಳೆದವು. ಬೆಳಿಗ್ಗೆಯಿಂದ ಆರಂಭಗೊಂಡು ಸಂಜೆ ನಡೆದ ಸಂಗೀತೋತ್ಸವದಲ್ಲಿ ಹಿಪ್ಪರಗಿ ಗ್ರಾಮದ ಮಕ್ಕಳು, ಕಲಾವಿದರು, ಜಮಖಂಡಿ ತಾಲೂಕಿನ, ಬಾಗಲಕೋಟೆ, ವಿಜಯಪೂರ, ಬೆಳಗಾವಿ, ಧಾರವಾಡ ಜಿಲ್ಲೆಗಳಿಂದ ಕಲಾವಿದರು ಆಗಮಿಸಿದ್ದರು.

## ಕಾಡಸಿದ್ಧೇಶ್ವರ ಬ್ಯಾಂಕಿಗೆ 60.81 ಲಕ್ಷ ರೂ. ಲಾಭ



**ಬನಹಟ್ಟಿ :** ಇಲ್ಲಿಯ ಕಾಡಸಿದ್ಧೇಶ್ವರ ಪಟ್ಟಣ ಸಹಕಾರಿ ಬ್ಯಾಂಕಿಗೆ ಪ್ರಸ್ತುತ ಸಾಲಿನಲ್ಲಿ ರೂ. 60.81 ಲಕ್ಷ ಲಾಭವಾಗಿದ್ದು, ಷೇರುದಾರರಿಗೆ ಶೇ. 10 ರಷ್ಟು ಲಾಭಾಂಶವನ್ನು ವಿತರಣೆ ಮಾಡಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ ಎಂದು ಬ್ಯಾಂಕಿನ ಅಧ್ಯಕ್ಷ ಸುರೇಶ ಅಬಕಾರ ತಿಳಿಸಿದರು.

ಭಾನುವಾರ ಇಲ್ಲಿನ ಭದ್ರನವರ ಕಲ್ಯಾಣ ಮಂಟಪದಲ್ಲಿ ಜರುಗಿದ ಬ್ಯಾಂಕಿನ 28ನೇ ಸವ9ಸಾಮಾನ್ಯ ಸಭೆಯಲ್ಲಿ ಅವರು ಮಾತನಾಡಿದರು.

ಬ್ಯಾಂಕಿನಲ್ಲಿ ಠೇವಣಿ ಮಾಡಿದ ಮೊತ್ತದ ಮೇಲೆ ವಿಮೆಯನ್ನು ಮಾಡಿಸಲಾಗಿದೆ. ಕೇವಲ ಎರಡು ತಿಂಗಳ ಅವಧಿಯಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳು ಸಲ್ಲಿಸುವ ಪ್ರತಿಯೊಂದು ಸೇವೆಯನ್ನು ಬ್ಯಾಂಕು ತನ್ನ ಗ್ರಾಹಕರಿಗೆ ನೀಡಲಿದೆ ಎಂದು ಸುರೇಶ ಅಬಕಾರ ತಿಳಿಸಿದರು.

ಬ್ಯಾಂಕಿನ ಹಿಂದಿನ ಅಧ್ಯಕ್ಷ ಶಂಕರ ಜುಂಜಪ್ಪನವರ ಮಾತನಾಡಿ, ಮುಂದಿನ ದಿನಗಳಲ್ಲಿ ಬ್ಯಾಂಕಿನ ಶಾಖೆಯನ್ನು ಆರಂಭಿಸುವ ದಿಶೆಯಲ್ಲಿ ಚಿಂತನೆ ನಡೆದಿದೆ. ಅದಕ್ಕೆ ಬೇಕಾದ ಠೇವಣಿ ಹಣ ಸಂಗ್ರಹಣೆ ಕಾರ್ಯವಾಗಬೇಕಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ, ಬ್ಯಾಂಕಿನ ಉಪಾಧ್ಯಕ್ಷ ಮಲ್ಲಿನಾಥ ಕಕಮರಿ, ನಿರ್ದೇಶಕ ಓಂಪ್ರಕಾಶ ಕಾಬ್ರಾ, ತೆರಿಗೆ ಸಲಹೆಗಾರ ಪ್ರಭು ಉಮದಿ ಮಾತನಾಡಿದರು.

ಶಾಸಕ ಸಿದ್ದು ಸವದಿ, ಬಸವಂತ ಜಾಡಗೌಡ, ಸುರೇಶ ಕೋಲಾರ, ಮಹೇಂದ್ರ ಹೊರಗಿನಮನಿ, ಎಸ್. ಎಂ. ಫಕೀರಪೂರ,

ಭೀಮಶಿ ಕುಲಗೋಡ, ಶಾಂತಾ ಸೋರಗಾಂವಿ, ರಜನಿ ಶೇಠೆ, ಆಡಳಿತ ಮಂಡಳಿಯ ಸದಸ್ಯರು ಹಾಗೂ ಮಹಾಲಿಂಗ ಬಾಗಲಕೋಟ, ಸುರೇಶ ಕೋಪರ್ಡೆ, ವಿಜಯ ಸಾವಳಗಿ, ಗೀತಾ ಬಡೇಮಿ, ಜಿ. ಸಿ. ಚಿಂಚಖಂಡಿ, ಗುರು ಮಮದಾಪುರ, ಪ್ರಕಾಶ ಸೋರಗಾಂವಿ, ಬಿ. ಎಸ್. ಆದಗೊಂಡ ಸೇರಿದಂತೆ ಇನ್ನೂ ಅನೇಕರು ಪಾಲ್ಗೊಂಡಿದ್ದರು.

# ಗಣೇಶೋತ್ಸವ ಮತ್ತು ಈದ್ ಮಿಲಾದ್ ಹಬ್ಬಗಳನ್ನು ಶಾಂತರೀತಿಯಿಂದ ಆಚರಿಸಿ: ರೋಷನ್ ಜಮೀರ್

**ಮಹಾಲಿಂಗಪುರ :** ಮುಂಬರುವ ಗಣೇಶೋತ್ಸವ ಹಾಗೂ ಈದ್ಮಿಲಾದ್ ಹಬ್ಬಗಳನ್ನು ಹಿಂದೂ-ಮುಸ್ಲಿಮ್ ಬಾಂಧವರು ಶಾಂತಿ ಸೌಹಾರ್ದತೆಯಿಂದ ಆಚರಿಸಿ ಎಂದು ಜಮಖಂಡಿ ಡಿವೈಎಸ್ಪಿ ರೋಷನ್ ಜಮೀರ್ ಮನವಿ ಮಾಡಿದರು.

ಪಟ್ಟಣದ ಪೊಲೀಸ್ ಠಾಣೆಯಲ್ಲಿ ಜರುಗಿದ ಶಾಂತಿಪಾಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಆಗಸ್ಟ್ 27 ರಂದು ಗಣೇಶ ಹಬ್ಬ ಮತ್ತು ನಂತರ ಬರುವ ಈದ್ ಮಿಲಾದ್ ಹಬ್ಬಗಳನ್ನು ಶಾಂತ ರೀತಿಯಲ್ಲಿ ಆಚರಿಸಿರಿ. ಮೊದಲಿನಿಂದಲೂ ಈ ಭಾಗದ ಜನರು ಸಹಿಷ್ಣುತೆಗೆ ಹೆಸರುವಾಸಿ. ಯಾವುದೇ ಬೇಧ ಭಾವಗಳಿಲ್ಲದೆ ಪರಸ್ಪರ ಸೌಹಾರ್ದತೆಯಲ್ಲಿ ಹಬ್ಬಗಳನ್ನು ಆಚ-'ರಿಸುತ್ತ ಬಂದಿರುವುದರಿಂದ ಇದು ಮಾದರಿ ಪಟ್ಟಣವೆನಿಸಿದೆ. ಇದು ಹೀಗೆಯೇ ಮುಂದುವರೆಯಲಿ ಎಂದರು.

ಗಣೇಶಮೂರ್ತಿಗಳುನಿಸರ್ಗದತ್ತವಾಗಿರಲಿ. ಪರಿಸರವನ್ನು ಹದಗೆಡಿಸುವ ರಾಸಾಯನಿಕ ಬಣ್ಣ ಲೇಪಿತ ಪಿಓಪಿ ಗಣಪತಿಗಳನ್ನು ಸರ್ಕಾರ ನಿಷೇಧಿಸಿದೆ. ಕಾರಣ ಎಲ್ಲರೂ ಸಹಕರಿಸಬೇಕು ಎಂದರು.




ಗಣೇಶ ಹಬ್ಬಕ್ಕಾಗಿ ಎಲ್ಲ ಇಲಾಖೆಗಳು ಒಂದೇ ಕಡೆ ಸೇರಿ ತಮಗೆ ಪರವಾನಿಗೆ ನೀಡಲಿದ್ದಾರೆ. ಠಾಣೆಯ ವ್ಯಾಪ್ತಿಯ 147 ಕಡೆಗಳಲ್ಲಿ ಪ್ರತಿಷ್ಠಾಪನೆಗೊಳ್ಳುವ ಗಣೇಶ ಮೂರ್ತಿಗಳಿಗೆ ಸೂಕ್ತ ಬಂದೋಬಸ್ತ ಕಲ್ಪಿಸಲಾಗುವುದು ಎಂದರು.

ಸ್ಥಳೀಯ ಠಾಣಾಧಿಕಾರಿ ಕಿರಣ ಸತ್ತಿಗೇರಿ ಮತ್ತುಅಪರಾಧವಿಭಾಗದಪಿಎಸ್ಐಶ್ರೀಮತಿ ಮಧು ಎಲ್. ಮಾತನಾಡಿ, ಸಾರ್ವಜನಿಕರು ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿ ಡಿಜೆ ಸೌಂಡ್ಗಳನ್ನು ಹಚ್ಚುವ ಬದಲು ಸಾಂಸ್ಕೃತಿಕ ಚಟುವಟಿಕೆಗಳಿಗೆ ಮತ್ತು ಅನ್ನ ಸಂತರ್ಪಣೆಗಳಿಗೆ ಬಳಸಿಕೊಳ್ಳಿ ಎಂದರು.

ಪುರಸಭೆ ಅಧಿಕಾರಿಗಳಾದ ಚಿದಾನಂದ ಮಠಪತಿ, ಎಂ. ಎಂ. ಮುಗಳಖೋಡ, ಹೆಸ್ಕಾಂ ಅಧಿಕಾರಿ ರಾಜೇಶ ಬಾಗೋಜಿ ಮಾತನಾಡಿದರು.

ಮುಖಂಡರಾದ ಶಂಕರಗೌಡ ಪಾಟೀಲ, ಗುರುಪಾದ ಅಂಬಿ, ಬಸವರಾಜ ಯರಗಟ್ಟಿ, ಚೆನ್ನಪ್ಪ ಪಟ್ಟಣಶೆಟ್ಟಿ, ವೆಂಕಪ್ಪ ಕೇದಾರಿ, ದಾದಾ ಸನದಿ, ಸಿರಾಜ ಪಾಂಡು, ವಿರುಪಾಕ್ಷ ಮುಂಗರವಾಡಿ, ಸೋಮು ಶಿರೋಳ, ಅರುಣ ಮೇತ್ರಿ, ಮಹಾದೇವ ಸಾವಂತ, ಉದಯ ಪವಾರ, ಪ್ರಭು ತಿಪ್ಪಶೆಟ್ಟಿ, ಫಾರೂಕ ಪಕಾಲಿ, ಮಲ್ಲು ಉಳ್ಳಾಗಡ್ಡಿ, ಆನಂದ ಬಂಡಿಗಣಿ, ರಾಘು ಚಿಂಚಲಿ, ಪ್ರಕಾಶ ಮರೆಗುದ್ದಿ,

ಮುಬಾರಕ ಯಕ್ಷಂಬಿ, ಮಹಾಲಿಂಗ ಭಜಂತ್ರಿ, ಮಹಾಂತೇಶ ಅವಟಗಿ, ಮಾರುತಿ ಇಟ್ನಾಳ, ಕರಿಯಪ್ಪ ತಮದಡ್ಡಿ, ಶ್ರೀಕಾಂತ ಹಿರೇಮಠ, ಶ್ರೀಮಂತ ಪಟ್ಟಣಶೆಟ್ಟಿ, ಜಬಿವುಲ್ಲಾ ಮುಲ್ಲಾ, ಪೊಲೀಸ್ ಸಿಬ್ಬಂದಿ ಮಹಾಲಿಂಗಪ್ಪ ಬೆಳಕೂಡ, ಜಗದೀಶ ದಳವಾಯಿ, ಇಮ್ರಾನ ಫಣಿಬಂದ ಸೇ-ರಿದಂತೆ ಪಟ್ಟಣ ಮತ್ತು ವಿವಿಧ ಹಳ್ಳಿಗಳ ಮುಖಂಡರು ಪಾಲ್ಗೊಂಡಿದ್ದರು. ವೈ. ವೈ. ಗಚನ್ನವರ ನಿರೂಪಿಸಿ, ವಂದಿಸಿದರು.

# 'ಸುದ್ದಿಮನೆ ಚೇತನ' ಪ್ರಶಸ್ತಿಗೆ ಈಶ್ವರ ಹನಗಂಡಿ ಆಯ್ಕೆ

**ಮಹಾಲಿಂಗಪುರ:** ಕಾರ್ಯನಿರತ ಪತ್ರಕರ್ತರ ಸಂಘ ಸ್ಥಳೀಯ ಘಟಕ ಹಾಗೂ ಮಧುರಾ ಪ್ರಕಾಶನ ವತಿಯಿಂದ ದಿವಂಗತ ಶಾಂತವೀರಯ್ಯ ಮನ್ನಯ್ಯನವರಮಠ ಅವರ ಸ್ಮರಣಾರ್ಥ ಸುದ್ದಿಮನೆಯಲ್ಲಿ ಕಾರ್ಯನಿರ್ವಹಿಸುವಪತ್ರಕರ್ತ-ರಿಗೆ ಕೊಡಮಾಡುವ 'ಸುದ್ದಿಮನೆ ಚೇತನ' ಪ್ರಶಸ್ತಿಗೆ ಜಮಖಂಡಿ ತಾಲ್ಲೂಕಿನ ಹುನ್ನೂರಿನ ಹಿರಿಯ ಪತ್ರಕರ್ತ ಈಶ್ವರ ಹನಗಂಡಿ ಆಯ್ಕೆಯಾಗಿದ್ದಾರೆ.

ಕೆಎಲ್ಇ ಪಾಲಿಟೆಕ್ನಿಕ್ನಲ್ಲಿ ಆಗಸ್ಟ 19 ರಂದು ಬೆಳಿಗ್ಗೆ 11 ಗಂಟೆಗೆ



ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿಪ್ರದಾನಮಾಡಲಾಗುವುದು. ಕಾ೦ು್ರ್ಕ್ರ್ವ್ುದ್ ಅಧ್ಯಕ್ಷತೆಯನ್ನು ಪ್ರಾಚಾರ್ಯ ಎಸ್. ಐ. ಕುಂದಗೋಳ ವಹಿಸುವರು. ಅನುಸೂಯಾ ಮನ್ನಯ್ಯನವರಮಠ ಗೌರವ ಉಪಸ್ಥಿತರಿರುವರು.

ಅತಿಥಿಗಳಾಗಿ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಆನಂದ ಧಲಬಂಜನ, ಸದಸ್ಯ ಎಸ್. ಎಸ್. ಈಶ್ವರಪ್ಪಗೋಳ, ಕೆ-ಎಲ್ಇ ಸ್ಥಾನಿಕ ಆಡಳಿತ ಮಂಡಳಿ ಸದಸ್ಯ ಸಂತೋಷ ಹುದ್ದಾರ, ಶ್ರೀಶೈಲ ವಜ್ಜರಮಟ್ಟಿ ಆಗಮಿಸುವರು ಎಂದು ಮಧುರಾ ಪ್ರಕಾಶನದ ಅಧ್ಯಕ್ಷ ಮಹೇಶ ಮನ್ನಯ್ಯನವರಮಠ, ಕಾನಿಪ ಸಂಘದ ಕಾರ್ಯದರ್ಶಿ ಹಣಮಂತ ನಾವಿ ತಿಳಿಸಿದ್ದಾರೆ.

# ಸಮಾಜ ಸೇವೆಯಿಂದ ದೇವರ ಕರುಣೆಗೆ ಪಾತ್ರರಾಗಬಹುದು

**ಜಮಖಂಡಿ :** ಮರದ ಬಾಯಿ ಬೇರು. ಬೇ-ರಿಗೆ ನೀರು ಹಾಕಿದ್ದರಿಂದಲೇ ಮರ ಹಣ್ಣು ಕೊಡುತ್ತದೆ. ಹಾಗೆಯೇ ಇಷ್ಟಲಿಂಗದ ಬಾಯಿ ಸಮಾಜ. ಸಮಾಜಸೇವೆ ಮಾಡಿದರೆ ದೇವರ ಕರುಣೆ ಮತ್ತು ಸಹಾನುಭೂತಿಗೆ ಪಾತ್ರರಾಗಲು ಸಾಧ್ಯ ಎಂದು ಬಸವಜ್ಯೋತಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಡಾ. ಟಿ. ಪಿ. ಗಿರಡ್ಡಿ ಹೇಳಿದರು.

ಶ್ರಾವಣ ಮಾಸದ ನಿಮಿತ್ಯ ಓಲೆಮಠದ ಆಶ್ರಯದಲ್ಲಿ ಜರುಗುತ್ತಿರುವ ಓಣಿಗೊಂದು ದಿನ ವಚನ ಶ್ರಾವಣ ಅಂಗವಾಗಿ ಹಂಚಿನಾಳ ಪ್ಲಾಟ್ನಲ್ಲಿ ಭಾನುವಾರ ಸಂಜೆ ನಡೆದ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಅವರು ಬಸವಣ್ಣನವರ

ವಚನ ಆಧಾರಿತ 'ಮರದ ಬಾಯಿ ಬೇರು' ಎಂಬ ವಿಷಯ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಕೇವಲ ತಮಗಾಗಿ, ತಮ್ಮವರಿಗಾಗಿ ಬದುಕಿದವರನ್ನು ಸಮಾಜ ಸ್ಮ-




ರಿಸುವುದಿಲ್ಲ. ಯಾರು ಸಮಾಜ ಸೇವೆಗಾಗಿ ಬದುಕಿರುತ್ತಾರೋ ಅಂಥವರನ್ನು ಮಾತ್ರ ಸ್ಮರಿಸುತ್ತದೆ.

ಮಹಾತ್ಮ ಗಾಂಧಿ, ಬುದ್ಧ, ಮಹಾವೀರ ಇವರಾರೂ ರಕ್ತ ಸಂಬಂಧಿಗಳಲ್ಲ. ಆದರೂ ಅವರನ್ನು ಸಮಾಜ ಸ್ಮರಿಸುತ್ತದೆ ಎಂದರು.

ಓಲೆಮಠದ ಆನಂದ ದೇವರು ಶ್ರೀಗಳು ಸಾನಿಧ್ಯ ವಹಿಸಿ ಮಾತನಾಡಿ, ಇನ್ನೊಬ್ಬರಿಗೆ ಉಪಕಾರ ಮಾಡುವ ಕಾರ್ಯ ಮಾಡಿದರೆ, ಭಗವಂತ ಒಲಿಯುತ್ತಾನೆ. ಇನ್ನೊಬ್ಬರ ಮುಖದಲ್ಲಿ ನಗು ತರಿಸಬೇಕು. ಇನ್ನೊಬ್ಬರ ಭಾವನೆಗಳು ಅರಳುವಂತೆ ಮಾಡಿದರೆ ಭಗವಂತನ ಸಾಕ್ಷಾತ್ಕಾರ ಆಗುತ್ತದೆ ಎಂದು ಆಶೀರ್ವಚನ ನೀಡಿದರು.

ಹಿರಿಯರಾದ ಗಿರಮಲ್ಲಪ್ಪ ಹಂಚಿನಾಳ, ಚಿತ್ರಕಲಾ ಮಹಾವಿದ್ಯಾಲಯದ ಪ್ರಾಚಾರ್ಯ ಕೇಶವ ರಾಠೋಡ, ಪಶುವೈದ್ಯ ಡಾ. ಹನುಮಂತ ಬಟಕುರ್ಕಿ ಉಪಸ್ಥಿತ-ರಿದ್ದರು. ಪರಮಾನಂದ ಹಲಗಣ್ಣವರ ಹಾಗೂ ಕುಟುಂಬ ವರ್ಗದವರು ಮಹಾಪ್ರಸಾದ ಸೇವೆ ಸಲ್ಲಿಸಿದರು.

ಸರಸ್ವತಿ ಸಬರದ (ಹೆಗಡಿ), ಗೋಪಾಲ ತುಳಜಾಪೂರ ಸಂಗೀತ ಸೇವೆ ಸಲ್ಲಿಸಿದರು. ಬಸಪ್ಪ ಕಾಗವಾಡ ಸ್ವಾಗತಿಸಿದರು. ಸಿದ್ಧಾರ್ಥ ಶಿಕ್ಷಣ ಮಹಾವಿದ್ಯಾಲಯದ ಉಪನ್ಯಾಸಕ ಪ್ರಕಾಶ ಮುಂದಿನಮನಿ ಸೊಗಸಾಗಿ ನಿರೂಪಿಸಿದರು.

# ತುಂಗಭದ್ರಾ। ಬಾಗಿದ ಆರು ಕ್ರಸ್ಟ್‌ಗೇಟ್‌ಗಳು: ವ್ಯರ್ಥವಾಗಿ ಹರಿದ 130 ಟಿಎಮ್‌ಸಿ ಅಡಿ ನೀರು

**ಕೊಪ್ಪಳ:** ಮಳೆಯಾಗಿ ಜಿಲ್ಲೆಯ ತುಂಗಭದ್ರಾ ಜಲಾಶಯಕ್ಕೆ ಉತ್ತಮ ಒಳಹರಿವು ಬರುತ್ತಿರುವುದು ಒಂದೆಡೆಯಾದರೆ, ಆರು ಕ್ರಸ್ಟ್‌ಗೇಟ್‌ಗಳಲ್ಲಿ ಕಾಣಿಸಿಕೊಂಡಿರುವ ದೋಷ ರೈತರನ್ನು ಮತ್ತೆ ಆತಂಕಕ್ಕೆ ಒಳಗಾಗುವಂತೆ ಮಾಡಿದೆ.

ವರ್ಷದ ಹಿಂದೆ 19ನೇ ಕ್ರಸ್ಟ್‌ಗೇಟ್ ಕೊಚ್ಚಿ ಹೋಗಿ ಅಪಾರ ಪ್ರಮಾಣದ ನೀರು ಪೋಲಾಗಿತ್ತು. ಒಂದು ವಾರದ ಕಾರ್ಯಾಚರಣೆ ಬಳಿಕ ತಾತ್ಕಾಲಿಕವಾಗಿ ಗೇಟ್ ಅಳವಡಿಸಲಾಗಿತ್ತು. ಈಗ 11, 18, 20, 24, 27 ಮತ್ತು 28ನೇ ಕ್ರಸ್ಟ್‌ಗಳು ಬಾಗಿವೆ.

ಇವುಗಳ ಮೂಲಕ ಜಲಾಶಯದಿಂದ ನೀರು ಹರಿಸುವುದನ್ನು ಸ್ಥಗಿತಗೊಳಿಸಲಾಗಿದೆ.



ನೀರು ಹರಿಸಲು ಪ್ರಯತ್ನಿಸಿದರೆ ಗೇಟ್ ತುಂಡಾಗುವ ಅಪಾಯ ಎದುರಾಗುವ ಆತಂಕವಿದೆ' ಎಂದು ಅಧಿಕಾರಿಗಳು ಹೇಳುತ್ತಾರೆ. ನಾಲ್ಕನೇ ಕ್ರಸ್ಟ್‌ಗೇಟ್‌ನಲ್ಲಿಯೂ ಇದೇ ರೀತಿಯ ಸಮಸ್ಯೆ ಕಾಣಿಸಿಕೊಂಡಿದ್ದು, ಗರಿಷ್ಠ ಎರಡು ಅಡಿ ಮಾತ್ರ ಗೇಟ್ ಎತ್ತಿ ನೀರು ಹರಿಸಲು ಸಾಧ್ಯವಿದೆ.

ಒಟ್ಟು 105.788 ಟಿಎಂಸಿ ಅಡಿ ಸಂಗ್ರಹಣಾ ಸಾಮರ್ಥ್ಯವುಳ್ಳ ಜಲಾಶಯದಲ್ಲಿ ಗೇಟ್‌ಗಳ ನಿರಂತರ ಸಮಸ್ಯೆಯಿಂದ ಈ ಸಲದ ಮುಂಗಾರಿನಿಂದ 80 ಟಿಎಂಸಿ ಅಡಿ ನೀರು ಮಾತ್ರ ಸಂಗ್ರಹಿಸಲಾಗಿದೆ. ಜುಲೈನಿಂದ ನೀರು ಹರಿಸಲು ಆರಂಭವಾಗಿದ್ದು ಇದುವರೆಗೆ ಅಂದಾಜು 130 ಟಿಎಂಸಿ ಅಡಿ ನೀರು ನದಿ ಪಾಲಾಗಿದೆ.

ಹಿಂದೆ ಗೇಟ್ ಕೊಚ್ಚಿಕೊಂಡು ಹೋದಾಗ 'ಜಲಾಶಯದ ಎಲ್ಲ ಗೇಟ್‌ಗಳನ್ನು ಬದಲಿಸಬೇಕಿದೆ' ಎಂದು ಜಲಾಶಯದ ಸುರಕ್ಷತಾ ತಜ್ಞರು ವರದಿ ನೀಡಿದ್ದರು. ಶುಕ್ರವಾರ ಜಲಾಶಯಕ್ಕೆ 23 ಸಾವಿರ ಕ್ಯೂಸೆಕ್ ಒಳಹರಿವು ಇದ್ದು, ಇಷ್ಟೇ ಪ್ರಮಾಣದಲ್ಲಿ ನೀರನ್ನು ಹೊರಬಿಡಲಾಗುತ್ತಿದೆ.

# ಒಳಮೀಸಲಾತಿ ಜಾರಿಗೊಳಿಸದಿದ್ದರೇ ರಾಜ್ಯದಲ್ಲಿ ರಕ್ತಪಾತ: ಕಾರಜೋಳ ಎಚ್ಚರಿಕೆ

**ವಿಜಯಪುರ :** 'ಒಳ ಮೀಸಲಾತಿ ಜಾರಿಗೊಳಿಸದೇ ಇದ್ದರೇ ಕಾಂಗ್ರೆಸ್ ಸರ್ಕಾರಕ್ಕೆ ಆಡಳಿತ ನಡೆಸಲು ಬಿಡುವುದಿಲ್ಲ, ಮುಖ್ಯಮಂತ್ರಿ, ಸಚಿವರು ರಸ್ತೆ ಮೇಲೆ ಓಡಾಡಲು ಬಿಡುವುದಿಲ್ಲ, ರಾಜ್ಯದಲ್ಲಿ ರಕ್ತಪಾತವಾಗಲಿದೆ' ಎಂದು ಸಂಸದ ಗೋವಿಂದ ಕಾರಜೋಳ ಎಚ್ಚರಿಕೆ ನೀಡಿದರು.

ನಗರದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಆಗಸ್ಟ್ 19ರ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಒಳಮೀಸಲಾತಿ ಜಾರಿಗೆ ಅಂತಿಮ ತೀರ್ಮಾನ ಸರ್ಕಾರ ಕೈಗೊಳ್ಳಲೇಬೇಕು. ಇಲ್ಲವಾದರೆ ರಾಜ್ಯದ 29 ಸಾವಿರ ಹಳ್ಳಿಗಳಲ್ಲಿರುವ ಅಸ್ಪೃಶ್ಯ ಸಮಾಜದವರು ಬೀದಿಗಳಿದು 'ಮಾಡು ಇಲ್ಲವೇ ಮಡಿ' ಹೋರಾಟ ನಡೆಸಲಿದ್ದಾರೆ' ಎಂದು ತಿಳಿಸಿದರು.

ಒಳ ಮೀಸಲಾತಿಗೆ ಸಂಬಂಧಿಸಿದಂತೆ ಕಾಂಗ್ರೆಸ್ ಸರ್ಕಾರವೇ ಈ ಹಿಂದೆ ರಚಿಸಿದ ಹಾವನೂರು ಆಯೋಗ, ಎ.ಜೆ. ಸದಾಶಿವ ಆಯೋಗ, ಕಾಂತರಾಜ ಆಯೋಗ ಮತ್ತು ನಾಗಮೋಹನ್ ದಾಸ್ ಆಯೋಗಗಳು ಸಲ್ಲಿಸಿರುವ ವರದಿಗಳಿವೆ. ಜೊತೆಗೆ ಬಿಜೆಪಿ ಸರ್ಕಾರದ ಅವಧಿಯಲ್ಲಿ ರಚನೆಯಾದ ಮಾಧುಸ್ವಾಮಿ ವರದಿ ಇದೆ. ಈ ಐದು ವರದಿಯಲ್ಲಿ ಯಾವುದಾದರು ಒಂದು ವರದಿಯನ್ನು ಸರ್ಕಾರ ಒಪ್ಪಿಕೊಳ್ಳಲೇಬೇಕು. ಅಗತ್ಯವಿದ್ದರೆ ವರದಿಯಲ್ಲಿ ತಿದ್ದುಪಡಿ ಮಾಡಿಯಾದರೂ ಜಾರಿಗೊಳಿಸಲೇಬೇಕು' ಎಂದು ಆಗ್ರಹಿಸಿದರು.

ಒಳ ಮೀಸಲಾತಿ ವಿಷಯವಾಗಿ ಅಸ್ಪೃಶ್ಯ ಸಮಾಜದವರಿಗೆ ಇತರೆ ಯಾರೊಂದಿಗೂ ತಕರಾರು ಇಲ್ಲ. ಯಾರಿಗೂ ಅನ್ಯಾಯ ಮಾಡಿ ಎಂದು ಹೇಳುವುದಿಲ್ಲ, ಯಾರನ್ನೂ ಕೈಬಿಡಿ ಎಂದು ಹೇಳುವುದಿಲ್ಲ, ಯಾರನ್ನೂ ಹೊರಹಾಕಿ ಎಂದು ಹೇಳುವುದಿಲ್ಲ, ಸರ್ಕಾರ ತಂದೆ ಸ್ಥಾನದಲ್ಲಿ ನಿಂತು ಅವರವರ ಪಾಲು ಅವರಿಗೆ ಸಿಗುವಂತೆ ಮಾಡಬೇಕು, ಒಳ ಮೀಸಲಾತಿಯಿಂದ ಯಾರೂ ವಂಚಿತವಾದಂತೆ ನೋಡಿಕೊಳ್ಳಬೇಕು' ಎಂದು ಒತ್ತಾಯಿಸಿದರು.

ಒಳಮೀಸಲಾತಿ ನೀಡಬೇಕು ಎಂಬುದರ ಹಿಂದೆ ಯಾವುದೇ ರಾಜಕೀಯ ಅಜೆಂಡಾ ಅಲ್ಲ, ಇದು ಅಸ್ಪೃಶ್ಯ ಸಮಾಜದ ಸಮಸ್ಯೆಯಾಗಿದೆ. ಸಾಮಾಜಿಕ ನ್ಯಾಯಕ್ಕಾಗಿ ಪಕ್ಷಾತೀತವಾಗಿ ರಾಜ್ಯದಾದ್ಯಂತ ಹೋರಾಟ ಆಯೋಜಿಸಲಾಗುವುದು' ಎಂದರು.

ದಲಿತರು ಸದಾ ಕಾಲ ಕಚ್ಚಾಡಿಕೊಂಡು ಇರಬೇಕು, ದಲಿತರು ವೋಟ್ ಬ್ಯಾಂಕ್ ಆಗಿರಬೇಕು ಎಂಬುದಷ್ಟೇ ಕಾಂಗ್ರೆಸ್ ಮನಸ್ಥಿತಿ. ಈ ಕಾರಣಕ್ಕಾಗಿ ಒಳ ಮೀಸಲಾತಿ ಜಾರಿಗೆ ರಾಜ್ಯ ಸರ್ಕಾರ ಹಿಂದೇಟು ಹಾಕುತ್ತಿದೆ' ಎಂದು ಆರೋಪಿಸಿದರು.

ಒಳ ಮೀಸಲಾತಿ ಜಾರಿಗೆ ಯಾವುದೇ ಬಲವಾದ ತಾಂತ್ರಿಕ ಅಡಚಣೆ ಇಲ್ಲ, ಇಷ್ಟಾದರೂ ಜಾರಿಗೆ ಮೀನಾಮೇಷ ಎಣಿಸಲು ಕಾರಣವೇನು? ಹಾಗಾದರೆ ಕಾಂಗ್ರೆಸ್‌ಗೆ ಸಂವಿಧಾನದ ಮೇಲೆ ನಂಬಿಕೆ ಇಲ್ಲ ಎಂದಾದರೂ ಹೇಳಲಿ' ಎಂದು ಸವಾಲು ಹಾಕಿದರು.

ನಾಗಮೋಹನದಾಸ್ ಅವರು ಬಹಳ ವೈಜ್ಞಾನಿಕವಾಗಿ ಹಾಗೂ ಸಮಾಜಗಳ ಬಗ್ಗೆ ಕಳಕಳಿ ಇಟ್ಟುಕೊಂಡು ಒಳಮೀಸಲಾತಿವರದಿಮಾಡಿದ್ದಾರೆ.ಈವರದಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಒಂದು ಕಡೆ ಸಂವಿಧಾನ, ಇನ್ನೊಂದು ಕಡೆ ಸುಪ್ರೀಂಕೋರ್ಟ್ ಆದೇಶವನ್ನು ಮುಂದಿಟ್ಟುಕೊಂಡು ಒಳ ಮೀಸಲಾತಿ ಜಾರಿಗೆ ಅಂತಿಮ ತೀರ್ಮಾನಕೈಗೊಳ್ಳಬೇಕು' ಎಂದು ಸಲಹೆ ನೀಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಯಾವ ಉದ್ದೇಶಕ್ಕಾಗಿ ಒಳ ಮೀಸಲಾತಿ ಜಾರಿಗೆ ವಿಳಂಬ ಮಾಡುತ್ತಿದ್ದಾರೆ ಎಂಬುದು ತಿಳಿಯುತ್ತಿಲ್ಲ. ಇಲ್ಲವಾದರೆ ನಮಗೆ ಜಾರಿ ಮಾಡಲು ಆಗುವುದಿಲ್ಲ ಎಂದಾದರೂ ಸಿದ್ದರಾಮಯ್ಯ ಸ್ಪಷ್ಟವಾಗಿ ಹೇಳಲಿ. ಕೇವಲ ಅಕ್ಕಿ ಕೊಟ್ಟು ನುಡಿದಂತೆ ನಡೆದ ಸರ್ಕಾರ ಎಂದು ಹೇಳಿದರೆ ಆಗುವುದಿಲ್ಲ. ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ ಭರವಸೆಯನ್ನು ಅನುಷ್ಠಾನಕ್ಕೆ ತರುವುದೇ ಸರ್ಕಾರದ ಆದ್ಯ ಕರ್ತವ್ಯ' ಎಂದು ಹೇಳಿದರು.

# ಮತಗಳ್ಳತನ ಆರೋಪ: ಕಾಂಗ್ರೆಸ್ ಪ್ರತಿಭಟನೆ

**ಕುಷ್ಟಗಿ:** ಕಳೆದಲೋಕಸಭಾಚುನಾವಣೆಯಲ್ಲಿ ಮತಗಳ್ಳತನ ನಡೆಸಿ ಕೇಂದ್ರದಲ್ಲಿ ಬಿಜೆಪಿ ಅಧಿಕಾರ ಕಬಳಿಸಿದೆ ಎಂಬ ವಿಚಾರವನ್ನು ಮುಂದಿಟ್ಟುಕೊಂಡು ಪಟ್ಟಣದಲ್ಲಿ ಶುಕ್ರವಾರ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಬ್ಲಾಕ್ ಕಾಂಗ್ರೆಸ್ ವತಿಯಿಂದ ನಡೆದ ಪ್ರತಿಭಟನೆಯಲ್ಲಿ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಬಿಜೆಪಿ ವಿರುದ್ಧ ಆಕ್ರೋಶ ಹೊರಹಾಕಿದರು. ನಂತರ ಕಾರ್ಗಿಲ್ ಹುತಾತ್ಮ ಯೋಧ ಮಲ್ಲಯ್ಯ ವೃತ್ತದ ಬಳಿ ಬಹಿರಂಗ ಸಭೆ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ



ಪ್ರಮುಖರಾದ ಶೇಖರಗೌಡ ಮಾಲಿಪಾಟೀಲ, ಲಾಡ್ಲೆಮಷಾಕ ದೋಟಿಹಾಳ, ಮಾನಪ್ಪತಳವಾರ, ಪುರಸಭೆ ಸದಸ್ಯ ಮೈನುದ್ದೀನ ಮುಲ್ಲಾ, 'ಬಿಜೆಪಿ ದೇಶದಲ್ಲಿನಪವಿತ್ರಮತದಾನವ್ಯವಸ್ಥೆಯನ್ನು ಹಾಳು ಮಾಡಿ ಅಧಿಕಾರಕ್ಕೆ ಬಂದಿದೆ. ಬೇರೆ ಬೇರೆ ಕಳ್ಳತನ ಮಾಡುವುದನ್ನು ಕಂಡಿದ್ದೆವು. ಆದರೆ ಮತಗಳನ್ನೂ ಕಳವು ಮಾಡಿ ಅದರ ಶ್ರೇಷ್ಠತೆಗೆ ಕಳಂಕತ ತಂದಂಥ ಘೋರ ಅಪರಾಧವನ್ನು ದೇಶ ಎಂದೂ ಕಂಡಿದ್ದಿಲ್ಲ. ಬೇರೆ ಕಳ್ಳರನ್ನು ಜೈಲಿಗೆ ಅಟ್ಟಲಾಗುತ್ತದೆ. ಆದರೆ ಪ್ರಜಾಪ್ರಭುತ್ವ ವಿರೋಧಿಯಾಗಿರುವ ಮತಗಳ್ಳರು ರಾಜಾರೋಷವಾಗಿ ಅಧಿಕಾರ ನಡೆಸಿದ್ದು ತಕ್ಷಣ ಅಧಿಕಾರದಿಂದ ಕೆಳಗಿಳಿಯಲಿ' ಎಂದು ಒತ್ತಾಯಿಸಿದರು.

ಬ್ಲಾಕ್ ಅಧ್ಯಕ್ಷ ಚಂದ್ರಶೇಖರ ನಾಲತ್ವಾಡ, ಶಿವಶಂಕರಗೌಡಪಾಟೀಲ, ಸೋಮಶೇಖರ ವೈಜಾಪುರ,

ಶಂಕರಗೌಡ ಪಾಟೀಲ, ತಿಪ್ಪಣ್ಣ, ಇಮಾಮಸಾಬ್ ಗರಡಿಮನಿ, ಮೆಹಬೂಬ್ ಕಮ್ಮಾರ, ಶೌಕತ್ ಕಾಯಿಗಡ್ಡಿ, ಹುಸೇನ ಕಾಯಿಗಡ್ಡಿ, ಬಸವರಾಜ ಭೋವಿ ಇತರರು ಪ್ರತಿಭಟನೆಯಲ್ಲಿದ್ದರು.

# ಸಜ್ಜನರ ಸಂಗದಿಂದ ದ್ವೇಷ ನಾಶ: ಪ್ರಾಚಾರ್ಯ ಡಾ. ಎಸ್. ಎಸ್. ಸುವರ್ಣಖಂಡಿ

**ಜಮಖಂಡಿ :** ಸಜ್ಜನರ ಸಂಗ ಹಾಗೂ ದುರ್ಜನರ ಸಂಗ ಎಂಬ ಎರಡು ಸಂಗಗಳಿವೆ. ಮನುಷ್ಯ ಸಂಗ ಜೀವಿ. ಸಂಗವಿಲ್ಲದೆ ಮಾತು, ವ್ಯವಹಾರ, ಬೆಳವಣಿಗೆ ಅಸಾಧ್ಯ.

ಅನುಭಾವಿಗಳ, ಸಜ್ಜನರ ಸಂಗದಿಂದ ರಾಗ, ದ್ವೇಷ, ತಮದಂತಹ ದುರ್ಗುಣಗಳು ನಾಶವಾಗುತ್ತವೆ ಎಂದು ನಿವೃತ್ತ ಗ್ರೇಡ್-1 ಪ್ರಾಚಾರ್ಯ ಡಾ. ಎಸ್. ಎಸ್. ಸುವರ್ಣಖಂಡಿ ಹೇಳಿದರು.

ಶ್ರಾವಣ ಮಾಸದ ನಿಮಿತ್ಯ ಓಲೆಮಠದ ಆಶ್ರಯದಲ್ಲಿ ಜರುಗುತ್ತಿರುವ ಓಣಿಗೊಂದು ದಿನ ವಚನ ಶ್ರಾವಣ ಅಂಗವಾಗಿ ಬಸವ ಭವನದಲ್ಲಿ ಶುಕ್ರವಾರ ಸಂಜೆ ನಡೆದ ಇಪ್ಪತ್ತೆರಡನೆ ದಿನದ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಅವರು 'ಸಂಗವೆರಡುಂಟು: ಒಂದ ಹಿಡಿ, ಒಂದ ಬಿಡು' ಎಂಬ ವಿಷಯ ಕುರಿತು ವಿಶೇಷ ಉಪನ್ಯಾಸ ನೀಡಿದರು.

ದುರ್ಜನರ, ಉಂಡ ಮನೆಗೆ ಎರಡು ಬಗೆಯುವವರ, ಉಪಕಾರ ಮಾಡಿದವ-ರಿಗೆ ಅಪಕಾರ ಎಸಗುವವರ, ಚಾಡಿ ಹೇಳುವವರ, ನಂಬಿಕೆ ದ್ರೋಹ ಮಾಡುವವರ, ಜಗಳವನ್ನು ಸಂಭ್ರಮಿಸುವವರ, ಕುಹಕ ಮಾತುಗಳನ್ನಾಡುವವರ ಸಂಗ ಮಾಡಬಾರದು ಎಂದರು.



ಓಲೆಮಠದ ಆನಂದ ದೇವರು ಶ್ರೀಗಳು ಸಾನಿಧ್ಯ ವಹಿಸಿ ಮಾತನಾಡಿ, ನೆಮ್ಮದಿಯಿಂದ ಸುಖಕರ ಮತ್ತು ಆನಂದಮಯ ಬದುಕು ನಡೆಸಬೇಕೆಂದರೆ ಸಜ್ಜನರ, ಉತ್ತಮರ ಸಂಗ ಮಾಡಬೇಕು. ಅನುಭಾವಿಗಳ ಸಂಗ ಮಾಡಿ ಪರಮಸುಖಿ ಆಗಿರಬೇಕು ಎಂದು ಆಶೀರ್ವಚನ ನೀಡಿದರು.

ಮೊಸರಾಗಿ ಬೆಣ್ಣೆ ತುಪ್ಪವಾಗಲು ಹಾಲು ಮೊಸರಿನ ಸಂಗ ಮಾಡಬೇಕು. ಆದರೆ, ನಿಂಬೆ ಹಣ್ಣಿನಂತೆ ಹುಳಿ ಹಿಂಡುವವರ ಸಂಗ ಮಾಡಬಾರದು.

ಭ್ರಮರ ಕೀಟವನ್ನು ತನ್ನಂತೆ ಭ್ರಮರವನ್ನಾಗಿ ಮಾಡುವಂತೆ ಮಹಾತ್ಮರ ಸಂಗದಿಂದ ಮಹಾತ್ಮರಾಗಬೇಕು. ತಾಪತ್ರಯಗಳು ಬೆನ್ನುಹತ್ತಿ ಬರಬಾರದೆಂದರೆ ಸಜ್ಜನರ ಸಂಗ ಮಾಡಬೇಕು ಎಂದರು.

ಬಸವ ಕೇಂದ್ರದ ಉಪಾಧ್ಯಕ್ಷ ಮಹಾಂತೇಶ ಅಂಗಡಿ, ಲಯನ್ಸ್ ಸಂಸ್ಥೆಯ ಉಪಾಧ್ಯಕ್ಷ ನಿತಿನ ಹುಲ್ಯಾಳಕರ, ರೋಟರಿ ಸಂಸ್ಥೆಯ ಅಧ್ಯಕ್ಷ ರಾಜಶೇಖರ ಕೋವಳ್ಳಿ ಉಪಸ್ಥಿತ-ರಿದ್ದರು. ಸರಸ್ವತಿ ಸಬರದ (ಹೆಗಡಿ), ಗೋಪಾಲ ತುಳಜಾಪೂರ ಸಂಗೀತ ಸೇವೆ ಸಲ್ಲಿಸಿದರು. ಕಾಡು ಮಾಳಿ ಸ್ವಾಗತಿಸಿದರು. ಅಣ್ಣಾಸಾಹೇಬ ಜಗದೇವ ನಿರೂಪಿಸಿದರು.

# ಸಮ ಸಮಾಜ ನಿರ್ಮಾಣಕ್ಕೆ ನಾವೆಲ್ಲರೂ ಸಂಕಲ್ಪ ಮಾಡಬೇಕು: ಡಾ. ಸುಶೀಲ್ ಕಲಾಲ್

**ಕೊಪ್ಪಳ :** ಮಹನಿಯರತ್ಯಾಗ ಬಲಿದಾನ, ದೂರದೃಷ್ಟಿಯ ಫಲವಾಗಿ ನಮಗೆ ಇಂದು ಸ್ವಾತಂತ್ರ ಸಿಕ್ಕಿದೆದೇಶಪ್ರೇಮಬೆಳೆಸಿಕೊಳ್ಳಲು ಪ್ರೇರಣೆಯಾದ ಈ ದಿನದಂದು ಸಮ ಸಮಾಜ ನಿರ್ಮಾಣವಾಗಲು ನಾವುಗಳು ಸೇರಿಒಗ್ಗೂಡಿ ಸಂಕಲ್ಪ ಮಾಡಬೇಕು ಎಂದು ಕೊಪ್ಪಳ ಸದ್ಭಾವನಾ ವೇದಿಕೆಯಅಧ್ಯಕ್ಷಡಾ, ಸುಶೀಲ್ ಕುಮಾರ್‌ಕಲಾಲ್ ಹೇಳಿದರು.




ಅವರು 79ನೇ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಪ್ರಯುಕ್ತ ಶುಕ್ರವಾರ ಸಂಜೆ ಕೊಪ್ಪಳದಲ್ಲಿ ಸದ್ಭಾವನಾ ವೇದಿಕೆ ವತಿಯಿಂದ ಏರಿಡಸಿದ ಸ್ವಾತಂತ್ರ ಭಾರತದ ಪ್ರಜೆ ಎಂಬ ನೆಲೆಯಲ್ಲಿ ನನ್ನ ಹೊಣೆಗಾರಿಕೆಗಳು ಎಂಬ ವಿಷಯದ ಬಗ್ಗೆ ಜರುಗಿದ ಚರ್ಚಾಕೂಟ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು, ಜಾತಿಧರ್ಮ ಭೇದಭಾವ ಮಾಡದೆಎಲ್ಲರೂ ಸಮಾನರಾಗಿ ಶಾಂತಿಯಿಂದ ಬಾಳಬೇಕು ನಾಡಿನಲ್ಲಿ ಶಾಂತಿ ನೆಲೆಸಬೇಕು ಒಗ್ಗೂಡಿ ಬಾಳಬೇಕು, ಸಮಾಜಮುಖಿ ಹಕ್ಕುಗಳು ಮತ್ತು ನಮ್ಮಕರ್ತವ್ಯಅರಿತು ಈ ನಾಡುಕಟ್ಟಬೇಕಾಗಿದೆ ,ತ್ಯಾಗ ಬಲಿದಾನಕ್ಕೆಅರ್ಥ ಬರಬೇಕೆಂದರೆ ಸ್ವಾತಂತ್ರ್ಯ ಹೋರಾಟಗಾರರ ಆದರ್ಶಗಳ ಪಾಲನೆಯಿಂದ ಮಾತ್ರಅದು ಸಾಧ್ಯವಾಗಲಿದೆಎಂದು ಹೇಳಿದ ಅವರು ನಮ್ಮ ಸದ್ಭಾವನಾ ವೇದಿಕೆ ವತಿಯಿಂದ ಇಂತಹ ಅರ್ಥ ಪೂರ್ಣ ಕಾರ್ಯಕ್ರಮಆಯೋಜಿಸಲು ಸಹಕಾರ ನೀಡಿದ ಪ್ರತಿಯೊಬ್ಬರಿಗೆ ಕೊಪ್ಪಳ ಸದ್ಭಾವನಾ ವೇದಿಕೆ ಧ್ಯಕ್ಷರಾದಡಾ. ಸುಶೀಲ್ ಕುಮಾರ್‌ಕಲಾಲ್ ಅಭಿನಂದಿಸಿದರು, ಚರ್ಚಾಕೂಟದಆರಂಭದಲ್ಲಿ ಸಾಹಿತಿ ಹಾಗೂ ಪತ್ರಕರ್ತಜಿಎಸ್ ಗೋನಾಳ್ ರವರು ಮಾತನಾಡಿದೇಶದ ಸ್ವತಂತ್ರಕ್ಕಾಗಿ ಬ್ರಿಟಿಷರ ವಿರುದ್ಧ ಹೋರಾಡಿ ಸ್ವತಂತ್ರತಂದುಕೊಟ್ಟ ಮಹಾನ ನಾಯಕರು ಹಾಕಿಕೊಟ್ಟ ಮಾರ್ಗದಲ್ಲಿ ನಮ್ಮ ಬದುಕು ನಾವು ಕಟ್ಟಿಕೊಳ್ಳಬೇಕು ಎಂದರು, ಗಣ್ಯರಾದ ಶಾಂತರಾಜ್‌ರವರು ಮಾತನಾಡಿ ಪ್ರತಿಯೊಬ್ಬ ಮನುಷ್ಯತನ್ನ ಕರ್ತವ್ಯಗಳನ್ನು ಪ್ರಮಾಣಿಕತೆಯಿಂದ ನಿರ್ವಹಿಸಿದಾಗ ಮಾತ್ರ ಸ್ವತಂತ್ರ ಬಲ ಗೊಳ್ಳುತ್ತದೆ ,ಅನೇಕ ಜನ ಮಹನೀಯರತ್ಯಾಗ ಬಲಿದಾನ ದಿಂದ ಸಿಕ್ಕಿರುವ ಈ ಸ್ವತಂತ್ರ ವನ್ನು ದಿನಾಚರಣೆಯಲ್ಲಿ ಸ್ಮರಣೆ ಮಾಡುವುದು ನಮ್ಮೆಲ್ಲರಕರ್ತವ್ಯವಾಗಿದೆಎಂದರು.

ಹೋರಾಟಗಾರರಾದ ಡಿ ಎಚ್ ಪೂಜಾರ್ ,ಈಶ್ವರ್ ಕೊರ್ಲಳ್ಳಿ, ಹಿರಿಯ ಪತ್ರಕರ್ತ ಸಾಧಿಕ್ ಅಲಿ, ನಾಮದೇವಜಕಲಿ, ಫಹಿಮುದ್ದೀನ್ ಮತ್ತು ನ್ಯಾಯವಾದಿ ಅಮರೇಶ್ ಭೀಮನಗೌಡ ಪಾಟೀಲ್ ಮತ್ತಿತರರುತಮ್ಮ ವಿಚಾರ ಮಂಡನೆ ಮಾಡಿದರು, ವೇದಿಕೆಯ ಸದಸ್ಯತಾಜು ದ್ದೀನ್‌ರವರುಕಾರ್ಯಕ್ರಮ ನಿರೂಪಿಸಿ ಆರಂಭದಲ್ಲಿ ಸ್ವಾಗತಿಸಿದರೆ ವೇದಿಕೆಯ ಕಾರ್ಯದರ್ಶಿ ಸೈಯದ್ ಹಿದಾಯತ್ ಅಲಿ ರವರುಕೊನೆಯಲ್ಲಿ ವಂದಿಸಿದರು.

# 30ಕ್ಕೂ ಹೆಚ್ಚು ಜನರ ಮೇಲೆ ಬೀದಿನಾಯಿ ದಾಳಿ

**ಕುಕನೂರು :** ಕುಕನೂರು ತಾಲ್ಲೂಕಿನ ತಳಕಲ್ ಹಾಗೂ ತಳಬಾಳ ಗ್ರಾಮಗಳಲ್ಲಿ ಶನಿವಾರ ಬೆಳಿಗ್ಗೆ ಬೀದಿ ನಾಯಿಯೊಂದು ದಾಳಿ ಮಾಡಿದ್ದರಿಂದ 30ಕ್ಕೂ ಹೆಚ್ಚು ಜನಗಾಯಗೊಂಡಿದ್ದಾರೆ. ಒಬ್ಬ ಬಾಲಕನ ಸ್ಥಿತಿ ಗಂಭೀರವಾಗಿದೆ.



ಮನೆಯ ಪಕ್ಕದಲ್ಲಿ ಆಟವಾಡುತ್ತಿದ್ದ ಎಂಟು ವರ್ಷದ ಯಮನೂರುಸಾಬ್ ಮಾಬುಸಾಬ್ ನದಾಫ್ ಎಂಬ ಮಗುವಿನ ಮೇಲೆ ನಾಯಿ ತೀವ್ರವಾಗಿ ದಾಳಿ ನಡೆಸಿ ಮಗುವನ್ನು ಗಂಭೀರವಾಗಿ ಗಾಯಗೊಳಿಸಿದೆ.

ದಾಳಿಯಿಂದ ಮಗುವಿನ ಕೆಳಗಿನ ತುಟಿಯು ಸಂಪೂರ್ಣವಾಗಿ ಹರಿದು ಹೋಗಿದೆ. ಮಗುವಿನ ತಲೆ, ಕೆನ್ನೆ ಮೇಲೆ ಗಂಭೀರ ಗಾಯಗಳಾಗಿವೆ.

ರಸ್ತೆಯಮೇಲೆಬೀದಿನಾಯಿಏಕಾಏಕಿಯಾಗಿಆಕ್ರಮಣ ನಡೆಸಿದೆ. ಕಂಡ ಕಂಡವರಿಗೆ ಕಡಿದಿದೆ. ಮಗುವಿನ ಚಿತ್ಕಾರ ಕೇಳಿದ ತಕ್ಷಣ ಅಕ್ಕಪಕ್ಕದವರು ಬಂದು ನಾಯಿಯನ್ನು ಹೊಡೆದೋಡಿಸಿದ್ದಾರೆ. ಇಲ್ಲದಿದ್ದರೆ ಬಾಲಕ ನಾಯಿಯ ದಾಳಿಗೆ ಬಲಿಯಾಗಬೇಕಿತ್ತು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ

ಗಾಯಗೊಂಡಿದ್ದ ಬಾಲಕ ಹಾಗೂ ಸಾರ್ವಜನಿಕರನ್ನು ತಕ್ಷಣ ಸ್ಥಳಿಯ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಲಾಗಿದೆ. ಹೆಚ್ಚಿನ ಚಿಕಿತ್ಸೆಗಾಗಿ ಬಾಲಕನನ್ನು ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ.

# ಎಂ.ಶಾಂತರಾಜ್ ಗೆ ಸದ್ಭಾವನಾ ವೇದಿಕೆಯಿಂದ ಸನ್ಮಾನ

**ಕೊಪ್ಪಳ :** ಕಿರ್ಲೋಸ್ಕರ್ ಕಾರ್ಖಾನೆಯಲ್ಲಿ ತಾಂತ್ರಿಕ ವಿಭಾಗದಲ್ಲಿ 31 ವರ್ಷ 5 ತಿಂಗಳುಗಳ ಕಾಲ ಸೇವಾ ಕಾರ್ಯ ಕಾರ್ಯನಿರ್ವಹಿಸಿ ಎಂ .ಶಾಂತರಾಜ್ ರವರು ಇದೇ ತಿಂಗಳ ಐದು ರಂದು ವಯೋ ನಿವೃತ್ತಿ ಹೊಂದಿದ್ದಾರೆ.



ಈ ಸಂದರ್ಭ ದಲ್ಲಿ ಅವರಿಗೆ ಕೊಪ್ಪಳ ಸದ್ಭಾವನಾ ವೇದಿಕೆ ವತಿಯಿಂದ ಅಧ್ಯಕ್ಷರಾದ ಡಾ. ಸುಶೀಲ್ ಕುಮಾರ್ ಕಲಾಲ್ ರವರ ನೇತೃತ್ವ ದಲ್ಲಿ ವೇದಿಕೆಯ ಪದಾಧಿಕಾರಿಗಳು ಸೇರಿ ಸನ್ಮಾನ ಮಾಡಿ ಅವರನ್ನು ಶುಭ ಕೋರಿ ಅಭಿನಂದಿಸಲಾಯಿತು, ಎಂ.ಶಾಂತರಾಜ್ ರವರು ಕೊಪ್ಪಳ ಸದ್ಭಾವನಾ ವೇದಿಕೆ ಯಲ್ಲಿ ಸಕ್ರಿಯರಾಗಿ ಕಾರ್ಯ ನಿರ್ವಹಿಸುತ್ತಾ ಪ್ರತಿಯೊಬ್ಬರಲ್ಲಿ ರಾಷ್ಟ್ರೀಯ ಭಾವೈಕ್ಯತೆ ಮೂಡಿಸುವಂತಹ ದಿಶೆಯಲ್ಲಿ ಕ್ರಿಯಾಶೀಲರಾಗಿ ಕಾರ್ಯ ನಿರ್ವಹಿಸುತ್ತಿರುವ ಅವರು ಈಗ ವಯೋ ನಿವೃತ್ತಿ ಹೊಂದಿದ್ದು ಈಗ ವೇದಿಕೆಯಲ್ಲಿ ಪೂರ್ಣ ಪ್ರಮಾಣ ದಲ್ಲಿ ಇನ್ನು ಹೆಚ್ಚಿನ ರೀತಿಯಲ್ಲಿ ಸೇವೆ ಸಲ್ಲಿಸಲಿ ಎಂದು ಶುಭ ಹಾರೈಸಲಾಯಿತು.

ಅಲ್ಲದೆ ಕಿರ್ಲೋಸ್ಕರ್ ಕಾರ್ಖಾನೆಯಲ್ಲಿ ಸೇವೆ ಸಲ್ಲಿಸುತ್ತಾ ಸಂದರ್ಭದಲ್ಲಿ 2006ರಲ್ಲಿ ಕಾರ್ಖಾನೆಯ ಅತ್ಯುತ್ತಮ "ಸುರಕ್ಷತಾ ಉದ್ಯೋಗಿ "ಎಂದು ರಾಜ್ಯ ಸರ್ಕಾರದಿಂದ ಪ್ರಶಸ್ತಿ ಕೂಡ ಲಭಿಸಿದೆ ಅಲ್ಲದೆ ವಿವಿಧ ಪ್ರಶಸ್ತಿ ಕೂಡ ಇವರ ಉತ್ತಮ ಸೇವೆಗಾಗಿ ಲಭಿಸಿರುವುದು ಇಲ್ಲಿ ಸ್ಮರಿಸಬಹುದಾಗಿದೆ.

ಈ ಸಂದರ್ಭದಲ್ಲಿ ಕೊಪ್ಪಳ ಸದ್ಭಾವನಾ ವೇದಿಕೆ ಅಧ್ಯಕ್ಷ ಡಾ, ಸುಶೀಲ್ ಕುಮಾರ್ ಕಲಾಲ್ ಸೇರಿದಂತೆ ವೇದಿಕೆಯ ಕಾರ್ಯದರ್ಶಿ ಸೈಯದ್ ಹಿದಾಯತ್ ಅಲಿ ಅಲ್ಲದೆ ಹೋರಾಟಗಾರ ಡಿ.ಎಚ್. ಪೂಜಾರ್ ಸಾಹಿತಿ ಪತ್ರಕರ್ತ ಜಿ.ಎಸ್. ಗೋನಾಳ, ಈಶ್ವರ್ ಕೊರಲಹಳ್ಳಿನ್ಯಾಯವಾದಿ ಅಮರೇಶ್ ಪಾಟೀಲ್ ಮತ್ತಿತರರು ಪಾಲ್ಗೊಂಡಿದ್ದರು

# ವ್ಯಾಜ್ಯಗಳ ಇತ್ಯರ್ಥಕ್ಕೆ ಮಧ್ಯಸ್ಥಿಕೆ ಅಭಿಯಾನ



**ಜಮಖಂಡಿ :** ನಗರದ ವಿವಿಧ ನ್ಯಾಯಾಲಯಗಳಲ್ಲಿ ವಿಚಾರಣೆಹಂತದಲ್ಲಿಬಾಕಿಉಳಿದಿರುವವ್ಯಾಜ್ಯಗಳನ್ನು ಮಧ್ಯಸ್ಥಿಕೆ ಮೂಲಕ ಇತ್ಯರ್ಥ ಪಡಿಸಿಕೊಳ್ಳಲು ರಾಷ್ಟ್ರೀಯ ವಿಶೇಷ ಮಧ್ಯಸ್ಥಿಕೆ ಅಭಿಯಾನದ ಮೂಲಕ ಅವಕಾಶ ನೀಡಲಾಗಿದೆ ಎಂದು ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶ ರಾಜಶೇಖರ ಎಸ್. ಹರಸೂರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಸುಪ್ರೀಂ ಕೋರ್ಟ್ ನೀಡಿದ ಆದೇಶದ ಮೇರೆಗೆ ದೇಶದಾದ್ಯಂತ 90 ದಿನಗಳ ರಾಷ್ಟ್ರಿಯ ವಿಶೇಷ ಮಧ್ಯಸ್ಥಿಕೆ ಅಭಿಯಾನ ಆರಂಭಿಸಲಾಗಿದೆ. ಈ ಕುರಿತು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ನೀಡಿರುವ ನಿರ್ದೇಶನದ ಪ್ರಕಾರ ಅಭಿಯಾನವನ್ನು ಈಗಾಗಲೇ ಆರಂಭಿಸಲಾಗಿದೆ.

ವೈವಾಹಿಕ, ಅಪಘಾತ ವಿಮೆ ಪರಿಹಾರ, ಕೌಟುಂಬಿಕ ವ್ಯಾಜ್ಯಗಳು, ಚೆಕ್ ಬೌನ್ಸ್ ಪ್ರಕರಣಗಳು, ವಾಣಿಜ್ಯ ವ್ಯಾಜ್ಯಗಳು,ಸೇವಾ ಸಂಬಂಧಿತ ಪ್ರಕರಣಗಳು,ಗ್ರಾಹಕ ಸಂಬಂಧಿಕ ಪ್ರಕರಣಗಳು, ಸಾಲ ಮರುವಸೂಲಾತಿ ಪ್ರಕರಣಗಳು, ವಾಟ್ನಿ ವ್ಯಾಜ್ಯಗಳು, ಭೂಸ್ವಾಧೀನ, ಕೆಲವೊಂದು ಅಪರಾಧ ಪ್ರಕರಣಗಳು ಹಾಗೂ ಇತರ ಸಿವಿಲ್ ಪ್ರಕರಣಗಳನ್ನು ಇತ್ಯರ್ಥ ಪಡಿಸಿಕೊಳ್ಳಲು ಅವಕಾಶವಿದೆ.

ಮಧ್ಯಸ್ಥಿಕೆ ಮೂಲಕ ಜನತಾ ನ್ಯಾಯಾಲಯ ನೀಡುವ ತೀರ್ಪು ಅಂತಿಮವಾಗಿರುತ್ತದೆ. ಜನತಾ ನ್ಯಾಯಾಲಯದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಲು ಅವಕಾಶ ಇರುವುದಿಲ್ಲ. ಶಾಂತಿಯುತ ಜೀವನ ನಡೆಸಲು ಉಭಯ ಕಕ್ಷಿದಾರರಿಗೆ ಇದೊಂದು ಸುವರ್ಣಾವಕಾಶವಾಗಿದೆ ಎಂದರು.

ಪ್ರಧಾನ ಸಿವಿಲ್ ನ್ಯಾಯಾಧೀಶ ಅರ್ಶದ ಎ. ಅನ್ಸಾರಿ ಮಾತನಾಡಿ, ಸಾರ್ವಜನಿಕರು, ಕಕ್ಷಿದಾರರು ಮಧ್ಯಸ್ಥಿಕೆ ಅಭಿಯಾನದ ಪ್ರಯೋಜನ ಪಡೆಯಲು ನ್ಯಾಯಾಲಯ ಆವರಣದಲ್ಲಿರುವ ಮಧ್ಯಸ್ಥಿಕೆ ಕೇಂದ್ರಕ್ಕೆ ಭೇಟಿ ನೀಡಬಹುದು ಅಥವಾ ತಾಲ್ಲೂಕು ಕಾನೂನು ಸೇವಾ ಸಮಿತಿಯ ಕಚೇರಿಯನ್ನು ಸಂಪರ್ಕಿಸಬಹುದು ಎಂದರು.

ಪರಸ್ಪರ ಒಪ್ಪಿಗೆ ಮತ್ತು ಮಧ್ಯಸ್ಥಿಕೆ ಮೂಲಕ ವ್ಯಾಜ್ಯಗಳನ್ನು ಇತ್ಯರ್ಥ ಪಡಿಸಿಕೊಳ್ಳುವ ಆಯ್ಕೆ ಮತ್ತು ಅವಕಾಶವನ್ನು ಕಕ್ಷಿದಾರರಿಗೆ ನೀಡಲಾಗಿದೆ. ಮಧ್ಯಸ್ಥಿಕೆ ಮೂಲಕ ನ್ಯಾಯಸಮ್ಮತ, ತ್ವರಿತ, ಕಡಿಮೆ ವೆಚ್ಚದಲ್ಲಿ, ನ್ಯಾಯಾಲಯದ ಶುಲ್ಕವಿಲ್ಲದೆ ಪ್ರಕರಣಗಳನ್ನು ಇತ್ಯರ್ಥ ಪಡಿಸಿಕೊಳ್ಳಬಹುದು ಎಂದರು.

# ಸರ್ಕಾರದ ಹಿಂದೂ ವಿರೋಧಿ ನೀತಿ ಖಂಡಿಸಿ ಪ್ರತಿಭಟನೆ

**ರಬಕವಿ–ಬನಹಟ್ಟಿ :** ಹಿಂದೂ ಧರ್ಮದ ದೇವಾಲಯಗಳ ಮೇಲೆ ಮತ್ತು ಧರ್ಮಸ್ಥಳದ ಕ್ಷೇತ್ರದ ಕುರಿತು ಅಪಪ್ರಚಾರ ಮಾಡುತ್ತಿರುವ ಕಾಂಗ್ರೆಸ್ ಸರ್ಕಾರದ ಹಿಂದೂ ವಿರೋಧಿ ನೀತಿಯನ್ನು ಖಂಡಿಸಿ ರಬಕವಿ ಬನಹಟ್ಟಿಯಲ್ಲಿ ಆಗಸ್ಟ್ 21 ರಂದು ಬೃಹತ್ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗುವುದು ಎಂದು ಶಾಸಕ ಸಿದ್ದು ಸವದಿ ತಿಳಿಸಿದರು.

ಅವರು ಭಾನುವಾರ ಇಲ್ಲಿನ ಬಿಜೆಪಿ ಕಾರ್ಯಾಲಯದಲ್ಲಿ ನಡೆದ ನಗರಸಭೆ, ಪುರಸಭೆ ಸದಸ್ಯರ ಹಾಗೂ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದರು.

ಮುಖ್ಯಮಂತ್ರಿ ಸಿದ್ಧರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಪವಿತ್ರ ಕ್ಷೇತ್ರಗಳಲ್ಲಿಒಂದಾದಧರ್ಮಸ್ಥಳದಬಗ್ಗೆಸುಳ್ಳುಪ್ರಚಾರವನ್ನುಮಾಡುತ್ತಿದೆ. ಇದೊಂದು ಅಂತರರಾಷ್ಟ್ರೀಯ ಫೀತೂರಿಯಾಗಿದೆ. ಈಗಾಗಲೇ ಈ ರೀತಿಯಾಗಿ ಆಂಧ್ರ ಪ್ರದೇಶದ ಮೇಲೆ ತಿರುಪತಿ ತಿಮ್ಮಪ್ಪ ಮತ್ತು ಶಬ–ರಿಮಲೈ ಅಯ್ಯಪ್ಪ ಸ್ವಾಮೀಜಿಯವರ ಕುರಿತು ಸುಳ್ಳು ಪ್ರಚಾರಗಳನ್ನು ಹಿಂದೂ ವಿರೋಧಿಗಳು ಮಾಡಿದ್ದರು.

ಅನಾಮಿಕ ಎನ್ನುವ ವ್ಯಕ್ತಿಯು ನೂರಾರು ಮಹಿಳೆಯರ ಮೃತ ದೇಹಗಳನ್ನು ತಾನು ಸ್ವತಃ ನೇತ್ರಾವತಿ ನದಿ ತೀರದಲ್ಲಿ ಹೂತಿದ್ದೇನೆ ಎಂದು ಹೇಳುತ್ತಿದ್ದು, ಈ ವ್ಯಕ್ತಿಯ ಹಿನ್ನೆಲೆ ನೋಡದೇ ಬೇಕಾಬಿಟ್ಟಿ ಆತ ತೋರಿಸಿದ ಸ್ಥಳಗಳಲ್ಲಿ ಅಗೆದು ನೋಡಲಾಗಿ ಅಲ್ಲಿ ಏನೂ ಸಿಕ್ಕಿಲ್ಲ ಎಂದು ಶಾಸಕ ಸಿದ್ದು ಸವದಿ ನುಡಿದರು.

# ಎಮ್ಮವರು ಬೆಸಗೊಂಡರೆ ಶುಭಲಗ್ನ ಎನ್ನಿರಯ್ಯಾ 16 ಜೋಡಿಗಳಿಗೆ ಶರಣ ಪದ್ಧತಿಯಂತೆ ವಿವಾಹ



**ಇಳಕಲ್ :** ಇಲ್ಲಿನ ಸಿಎಸ್ ವಿಎಂ ಪ್ರೌಢಶಾಲೆಯ ಸಭಾಭವನದಲ್ಲಿ ಸೋಮವಾರದಂದು ಅಡತ ವ್ಯಾಪಾರಸ್ಥರಿಂದ16ಜೋಡಿಗಳಸಾಮೂಹಿಕವಿವಾಹ ಮಹೋತ್ಸವ ನಡೆಯಿತು. ಶಾಸಕ ವಿಜಯಾನಂದ ಕಾಶಪ್ಪನವರ ನವಜೋಡಿಗಳಿಗೆ ಶುಭ ಕೋರಿ ಶರಣರ ಬಾಳು ನಿಮ್ಮದಾಗಲಿ ಎಂದು ಹರಸಿದರು.

ಗುರುಮಹಾಂತಶ್ರೀಗಳು ಸಮೇತ ನಾಡಿನ ನಾನಾ ಮಠಗಳ ಸ್ವಾಮಿಜಿಗಳು ನಗರಸಭೆ ಅಧ್ಯಕ್ಷೆ ಸುಧಾರಾಣಿ ಸಂಗಮ ಉಪಾಧ್ಯಕ್ಷೆ ಕಾಳಮ್ಮ ಜಕ್ಕಾ ಅಡತ ವ್ಯಾಪಾರಸ್ಥರ ಸಂಘದ ಪದಾಧಿಕಾರಿಗಳು ಸಾಕ್ಷಿಯಾದ ಈ ವಿವಾಹ ಮಹೋತ್ಸವದಲ್ಲಿ ಮಲ್ಲಯ್ಯ ಗಣಾಚಾರಿ ನವ ವಧುವರರಿಗೆ ಶರಣರ ವಚನಗಳನ್ನು ಹಾಡುವ ಮೂಲಕ ಸಾಮೂಹಿಕ ಕಲ್ಯಾಣದ ವಿಧಿ ವಿಧಾನಗಳನ್ನು ಹಂಚಿಕೊಂಡರು.ಪ್ರವೀಣ ಮುದಗಲ್ಲ ನಿರೂಪಿಸಿದರು.

**ವರದಿ ನಬಿ ಹುಣಚಗಿ**

# ಸುರಿಯುವ ಮಳೆಯಲ್ಲಿ ಧರಣಿ ನಡೆಸಿದ ನರಿಬೋಳ ಆರೋಗ್ಯದಲ್ಲಿ ಏರುಪೇರು: ಆಸ್ಪತ್ರೆಗೆ ದಾಖಲು

**ಕಲಬುರಗಿ:** ಎಪಿಎಂಸಿಯಲ್ಲಿ ಇರುವ ರಾಜಸ್ಥಾನ ಸೇರಿ ಸೂಮಾರು 300ಕ್ಕೂ ಹೆಚ್ಚಿನ ಅನಧಿಕೃತ ಅಂಗಡಿಗಳ ತೆರವಿಗೆ ಆಗ್ರಹಿಸಿ ಸುರಿಯುವ ಮಳೆಯಲ್ಲಿಯೇ ಧರಣಿ ನಡೆಸಿದ ಕಲ್ಯಾಣ ಕರ್ನಾಟಕ ಪ್ರತ್ಯೇಕ ರಾಜ್ಯ ಹೋರಾಟ ಸಮಿತಿ ಅಧ್ಯಕ್ಷ ಎಂ.ಎಸ್.ಪಾಟೀಲ ನರಿಬೋಳ ಅವರ ಆರೋಗ್ಯದಲ್ಲಿ ಏರುಪೇರಾದ ಹಿನ್ನೆಲೆಯಲ್ಲಿ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.



ಎಪಿಎಂಸಿಯಲ್ಲಿರುವ ಅನಧಿಕೃತ ಅಂಗಡಿಗಳ ತೆರವಿಗೆ ಆಗ್ರಹಿಸಿ ಕಳೆದ ಒಂದು ವರ್ಷದಿಂದ ನಿರಂತರ ಹೋರಾಟ ಮಾಡುತ್ತ ಬೆಂಗಳೂರಿಗೆ ತೆರಳಿ ಮನವಿ ಸಲ್ಲಿಸಿ 69 ದಿನಗಳ ಅನಿರ್ಧಿಷ್ಠಾವಧಿ ಧರಣಿ, ಪಾದಯಾತ್ರೆ ಸೇರಿದಂತೆ ಹಂತ ಹಂತದ ಹೋರಾಟ ಮಾಡಿದ ಫಲವಾಗಿ ಕೃಷಿ ಮಾರುಕಟ್ಟೆ ಸಚಿವರು, ಕಲಬುರ್ಗಿ ಉಸ್ತುವಾರಿ ಸಚಿವರಾದ ಪ್ರಿಯಾಂಕ್ ಖರ್ಗೆ ಅವರು ಖಡಕ್ ಆದೇಶ ನೀಡಿ ಕಾಯ್ದೆಯಂತೆ ಅನಧಿಕೃತ ಅಂಗಡಿಗಳನ್ನು ತೆರವುಗೋಳಿಸಿ ಎಂದು ಸೂಚಿಸಿದಾಗ ಕಾಯ್ರದರ್ಶಿ ಅವರು ಆಗಷ್ಟ 18 ರ ವರೆಗೆ ಖಾಲಿ ಮಾಡುವಂತೆ ನೋಟಿಸ್ ಕೋಡುತ್ತೆವೆ ಆಗಲೂ ಖಾಲಿ ಮಾಡದಿದ್ದರೆ ನಾವು ಕೀಲಿ ಹಾಕುತ್ತೆವೆ ಎಂದು ಹೆಳಿದ್ದರು ಆದರೆ ಇಂದು ಅವಧಿ ಮುಗಿದರೂ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳದೇ ಇರುವ ಹಿನ್ನೆಲೆಯಲ್ಲಿ ಎಮ.ಎಸ್.ಪಾಟೀಲ್ ನರಿಬೋಳಿ ಅವರು ಎಪಿಎಂಸಿ ಆವರಣದಲ್ಲಿ ಮಳೆಯಲ್ಲಿಯೆ ಪ್ರತಿಭಟನೆ ಪ್ರಾರಂಬಿಸಿದರು ಬೆಳಿಗ್ಗೆಯಿಂದ ಪ್ರಾರಂಭವಾದ ಪ್ರತಿಬಟನೆ ವಿಷಯ ತಿಳಿಯುತ್ತಿದ್ದಂತೆ ಕಛೇರಿಗೆ ಆಗಮಿಸಿದ ಕಾರ್ಯದರ್ಶಿಗಳು ಕೊಟ್ಟ ಭರವಸೆಯಂತೆ ಕೆಲಸ ಮಾಡಲು ಸಿದ್ದರಿದ್ದವೆ 300 ಅಂಗಡಿಗಳಲ್ಲಿ 13 ಅಂಗಡಿಗಳವರು ನ್ಯಾಯಾಲಯದಿಂದ (ಸ್ಟೆ)ತಡೆಯಾಗ್ನೆ ತಂದಿದ್ದಾರೆ ತಡೆಯಾಜ್ಞೆ ತೆರವು ಗೋಳಿಸುವ ಕುರಿತಂತೆ ನ್ಯಾಯವಾದಿಗಳ ಜೋತೆ ಚರ್ಚಿಸಲು ಹೋಗಿದ್ದೆ ನಾವು ಇವತ್ತಿನಿಂದಲೆ13ಅಂದಡಿಗಳಹೋರತುಪಡಿಸಿ ಇನ್ನುಳಿದ ಅಂಗಡಿಗಳನ್ನು ಕೀಲಿ ಹಾಕಿ ಪಂಚನಾಮೆ ಮಾಡುತ್ತೆವೆ ಎಂದು ನರಿಬೋಳ ಅವರಿಗೆ ತಿಳಿಸಿದರು. ಆಗ ಕೀಲಿ ಹಾಕಲು ಪ್ರಾರಂಬಮಾಡುವವರೆಗೂ ಮಳೆಯಲ್ಲಿಯೆ ಕೂಳಿತಕೋಳ್ಳುವೆ ಎಂದು ಮಳೆಯಲ್ಲಿ ಧರಣಿ ಮುಂದುವರೆಸಿದ ಪರಿಣಾಮ ನರಿಬೋಳ ಆರೋಗ್ಯದಲ್ಲಿ ಎರುಪೇರಾಗಿ ನಗರದ ಯುನೈಟೆಡ್ ಹಾಸ್ಪತ್ರೇಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ.

# ಕೃಷ್ಣಾ ನದಿಗೆ ಬಾಗಿನ ಅರ್ಪಣೆ

**ರಬಕವಿ:** ಇಲ್ಲಿಯ ಮಲ್ಲಿಕಾರ್ಜುನ ದೇವರ ಜಾತ್ರಾ ಮಹೋತ್ಸವದ ಮೂರನೇ ದಿನವಾದ ಇಂದು ಬುಧವಾರ ಮುಂಜಾನೆ ಜಾತ್ರಾ ಕಮೀಟಿ ಹಾಗೂ ಶಂಕರಲಿಂಗ ದೇವಸ್ಥಾನ ಟ್ರಸ್ಟ್ ಕಮೀಟಿಯ ಹಿರಿಯರು ಸಮೀಪದ ಕೃಷ್ಣಾ ನದಿಗೆತೆರಳಿಬಾಗಿನಅರ್ಪಿಸಿದರು. ಹಿರಿಯರು ಪೂಜೆ ಸಲ್ಲಿಸಿ ಕೃಷ್ಣಾ ನದಿಗೆ ಬಾಗಿನ ಅರ್ಪಿಸಿದರು.

ಈ ಸಂದರ್ಭದಲ್ಲಿ ಬಾಲಚಂದ್ರ ಉಮದಿ,

ಪ್ರಭು ಉಮದಿ, ಡಾ. ಸಂಗಮೇಶ ಹತಪಾಕಿ, ಮಾರುತಿ ನಾಯಕ, ಬಸವರಾಜ ದಲಾಲ, ಸೋಮಶೇಖರ ಕೊಟ್ರಶೆಟ್ಟಿ, ಡಾ. ರವಿ ಜಮಖಂಡಿ, ಶಿವಾನಂದ ಹೊಸಮನಿ, ಶಂಕರಗೌಡ ಪಾಟೀಲ, ಭೀಮಸಿ ಪಾಟೀಲ, ಚನಮಲ್ಲಪ್ಪ ತೇಲಿ, ಈಶ್ವರ ನಾಗರಾಳ, ಶಿವಾನಂದ ಕಡಕೋಳ, ಕುಷ್ಣಪ್ಪ ಪಾಟೀಲ, ಆರ್. ಎಸ್. ಖಿಪಲಿ, ಪ್ರೇಮ ಪೂಜಾರಿ, ಕೆ. ಎಸ್. ರಜಪೂತ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

# ಗೋವಾ–ತಮ್ನಾರ ವಿದ್ಯುತ್ ಯೋಜನೆ: ಮರುಪರಿಶೀಲನೆಗೆ ಆಗ್ರಹ

**ನವಲಗುಂದ :** ಧಾರವಾಡದ ನರೇಂದ್ರ ಮೂಲಕ ಹೋಗುವ ಗೋವಾ–ತಮ್ನಾರ 400 ಕೆ.ವಿ. ಸಾಮರ್ಥ್ಯದ ವಿದ್ಯುತ್ ಯೋಜನೆಗೆ ನಮ್ಮ ರಾಜ್ಯ ಸರ್ಕಾರ ಷರತ್ತುಬದ್ಧ ಅನುಮತಿ ನೀಡಿ ಸಹಮತಿಸಿದ ಯೋಜನೆಗೆ ಬೇಕಾಗುವ ವನ್ಯಜೀವಿ ಮಂಡಳಿಯಿಂದ ಅನುಮತಿ ಸಿಗುವವರೆಗೆ ಗೋವಾ–ತಮ್ನಾರ ವಿದ್ಯುತ್ ಯೋಜನೆಯನ್ನು ತಡೆಹಿಡಿದು ಮರು ಪರಿಶೀಲಿಸಬೇಕೆಂದು ಮಹದಾಯಿ ಕಳಸಾ ಬಂಡೂರಿ ಹೋರಾಟಗಾರರು ಶಾಸಕ ಎನ್ ಎಚ್ ಕೋನರಡ್ಡಿ ನೇತೃತ್ವದ ನಿಯೋಗ ಬೆಂಗಳೂರಲ್ಲಿ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ ಕೆ ಶಿವಕುಮಾರ ಅವರನ್ನು ಒತ್ತಾಯಿಸಿದರು.



ಮಹಾದಾಯಿ ನ್ಯಾಯಾಧೀಕರಣ ಐ–ತೀರ್ಪಿನಲ್ಲಿ ಕರ್ನಾಟಕ ರಾಜ್ಯಕ್ಕೆ 13.42 ಟಿಎಂಸಿ ನೀರನ್ನು ಉಪಯೋಗಿಸಲು ಆದೇಶ ನೀಡಿದ ನಂತರ ಸುಪ್ರೀಂಕೋರ್ಟ್ ನಿರ್ದೇಶನದ ಮೆರೆಗೆ ಕೇಂದ್ರ ಸರಕಾರ ಅಧಿಸೂಚನೆ ಹೊರಡಿಸಿದೆ. ಈ ಯೋಜನೆಗೆ ಬೆಳಗಾವಿ ಜಿಲ್ಲೆಯ ಖಾನಾಪೂರ ತಾಲ್ಲೂಕಿನ ಅರಣ್ಯ ಪ್ರದೇಶವನ್ನು ಬಳಸಿಕೊಳ್ಳಲು ರಾಜ್ಯ ವನ್ಯಜೀವಿ ಮಂಡಳಿ ಅನುಮೋದನೆ ನೀಡಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು ಕೇಂದ್ರ ಸರ್ಕಾರದ ಅರಣ್ಯ ಹಾಗೂ ಪರಿಸರ ಇಲಾಖೆಯು ರಾಷ್ಟ್ರೀಯ ವನ್ಯಜೀವಿ ಮಂಡಳಿಗೆ ರಾಜ್ಯ ಸರ್ಕಾರ ಸಲ್ಲಿಸಿದ ಪ್ರಸ್ತಾವನೆಗೆ ಅನುಮೋದನೆಯನ್ನು ಇಲ್ಲಿಯವರೆಗೂ ನೀಡುತ್ತಿಲ್ಲ.

ಉತ್ತರ ಕರ್ನಾಟಕದ ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರವೆಂದರೆ ಮಹಾದಾಯಿ ನೀರನ್ನು ಮಲಪ್ರಭಾ ನದಿಗೆ ಸೇರಿಸಿದರೆ 4 ಜಿಲ್ಲೆ, 14 ತಾಲ್ಲೂಕಿನ ನಗರ ಹಾಗೂ ಗ್ರಾಮಗಳಿಗೆ ಕುಡಿಯುವ ನೀರಿಗೆ ಪರಿಹಾರ ಎಂದರೆ ಈ ಯೋಜನೆ. ರಾಜ್ಯ ಸರ್ಕಾರದ ವತಿಯಿಂದ ತಾವು ಈಗಾಗಲೇ ಕಾಮಗಾರಿ ಪ್ರಾರಂಭಿಸಲು ಟೆಂಡರ್‌ಕರೆದುಗುತ್ತಿಗೆಧಾರರಿಗೆಕಾರ್ಯಾದೇಶ ನೀಡಿದ್ದೀರಿ. ವನ್ಯಜೀವಿ ಮಂಡಳಿಯ ಅನುಮತಿ ಅವಶ್ಯವಿದ್ದು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕು ಹಾಗೂ ಮಹದಾಯಿ ಕಳಸಾ ಬಂಡೂರಿ ಹೋರಾಟಗಾರರ ಮೇಲಿನ ಮೊಕದ್ದಮೆಗಳನ್ನು ಹಿಂಪಡೆಯಬೇಕು ಎಂದು ಒತ್ತಾಯಿಸಿದರು.

ಮಹದಾಯಿ ರೈತ ಹೋರಾಟಾರರಾದ ಲೋಕನಾಥ ಹೆಬಸೂರ, ಸಿದ್ದು ತೇಜಿ, ವಿರೇಶ ಸೊಬರದಮಠ, ರಘುನಾಥ ನಡುವಿನಮನಿ, ಫಕ್ಕೀರಗೌಡ ವೆಂಕನಗೌಡ್ರ, ರವಿ ಕಂಬಳಿ, ಗೌಡಪ್ಪಗೌಡ ದೊಡ್ಡಮನಿ, ಬಸಣ್ಣ ಓಲೇಕಾರ, ತಿಪ್ಪಣ್ಣ ಸಾಲಿ, ನಾಗೇಶ ತುಳಸಿಗೆರಿ, ಶಿವಾನಂದ ಮಠಪತಿ, ಸಿದ್ದಪ್ಪ ಪೂಜಾರ, ವೀರಣ್ಣ ಹಿರೇಮಠ, ಶಿವಾನಂದ ಚಿಕ್ಕನರಗುಂದ, ದೇವಪ್ಪ ಗುಡಿಸಾಗರ, ಬಾಷೇಸಾಬ ಅನ್ಸಾರಿ, ರವಿ ವಡ್ಡರ, ಮಂಜುನಾಥ ಸಂಗಣ್ಣವರ, ನಿಂಗಪ್ಪ ಬಡಿಗೇರ ಸೇರಿ ನೂರಾರು ರೈತರು ಇದ್ದರು.

# ಡಾ.ಶರಣಬಸವಪ್ಪ ಅಪ್ಪ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ

**ಕಲಬುರಗಿ:** ನೂತನವಿದ್ಯಾಲಯಮಾಜಿವಿದ್ಯಾರ್ಥಿಗಳ ಸಂಘದ ವತಿಯಿಂದ ಡಾ.ಶರಣಬಸವಪ್ಪ ಅಪ್ಪಾ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು. ನೂತನ ವಿದ್ಯಾಲಯದ ಕಾಯರ್ಕಾರಿ ಮಂಡಳಿ ಸದಸ್ಯ ಪಾಂಡುರಂಗರಾವ್ ದೇಶಮುಖ ಅವರು ಮಾತನಾಡಿ, ಡಾ.ಶರಣಬಸವಪ್ಪ ಅಪ್ಪಾ ಅವರು ಈ ಹಿಂದುಳಿದ ಭಾಗದಲ್ಲಿ ಶೈಕ್ಷಣಿಕ ಕ್ರಾಂತಿ, ದಾಸೋಹ ಸೇವೆಯ ಮೂಲಕ ತಮ್ಮ ಹೆಸರನ್ನು ಚಿರಸ್ಥಾಯಿ ಆಗಿಸಿದ್ದಾರೆ. ಈ ಭಾಗದಲ್ಲಿ ಅನೇಕ ಶಿಕ್ಷಣ ಸಂಸ್ಥೆಗಳನ್ನು ಹುಟ್ಟುಹಾಕಿದ ಕೀರ್ತಿ ಅವರಿಗೆ ಸಲ್ಲುತ್ತದೆ. ತಮ್ಮ ಆದರ್ಶ ಜೀವನದ ಮೂಲಕ ಯುವ ಪೀಳಿಗೆಗೆ ಮಾದರಿಯಾಗಿದ್ದಾರೆ. ಅದರಲ್ಲೂ ಅಪ್ಪಾ ಅವರು ಎನ್ ವಿ ಸಂಸ್ಥೆಯ ಹಳೆಯ ವಿದ್ಯಾರ್ಥಿ ಎಂದು ಸ್ಮರಿಸಿದರು. ಅಲ್ಲದೆ ನೂತನ ವಿದ್ಯಾಲಯದ ಅಧ್ಯಕ್ಷರಾದ ಡಾ.ಗಿರೀಶ್ ಗಲಗಲಿ ಮಾತನಾಡಿ, ಈ ಭಾಗಕ್ಕೆ ಅಪ್ಪಾ ಅವರ ಕೊಡುಗೆ ಅನನ್ಯವಾದುದು. ಶಿಕ್ಷಣ ಕ್ಷೇತ್ರದಲ್ಲಿ ತಮ್ಮದೇ ಛಾಪನ್ನು ಮೂಡಿಸುವ ಮೂಲಕ ಹೆಸರುವಾಸಿಯಾಗಿದ್ದಾರೆ. ದಾಸೋಹ ಸೇವೆ ಮಾಡುವ ಮೂಲಕ ತಮ್ಮದೇ ಆದ ವಿಶಿಷ್ಟ ಸಾಧನೆ ಮಾಡಿದ್ದಾರೆ ಎಂದು ಸ್ಮರಿಸಿದರು.

ಅಪ್ಪಾ ಅವರ ನಿಧನದ ಹಿನ್ನೆಲೆಯಲ್ಲಿ ಅಪ್ಪಾ ಅವರ ಗೌರವಾರ್ಥ ಮರುದಿನ ಶಾಲೆಗೆ ರಜೆ ಗೋಷಿಸಲಾಯಿತು.

ಕಾರ್ಯಕ್ರಮದಲ್ಲಿ ಸುಹಾಸ್ ಆರ್. ಖನಗೆ, ಅನಂತ ಜೀಗುಡಿ, ಅರುಣ ಖರ್ಗಲಿಕರ, ಸುಂದರ ಕುಲಕರ್ಣಿ, ರಾಮಚಂದ್ರ ಶಾನಬೋಗ ಉಪಸ್ಥಿತರಿದ್ದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State